ಕೊರವಂಜಿ

ಸಂಪುಟ ೧೨ ಜುಲೈ ೧೯೫೩ ಸಂಚಿಕೆ ೪

ಕೀರ್ತಿಶೇಷ ಶ್ಯಾಮಪ್ರಸಾದ ಮುಖರ್ಜಿ

ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲದಿಂದಲೇ ಆಡಳಿತ ನಡೆಸುವ ಪಕ್ಷವಿರುವುದು ಅನಿವಾರ್ಯ. ದಿನದಿನದ ಕೆಲಸಕಾರ್ಯಗಳು ಲೋಕಸಭೆಯಲ್ಲಿ ಸುವ್ಯವಸ್ಥೆಯಿಂದ ಸಾಗಬೇಕಾದರೆ ಈ ನಿಯಮ ಅವಶ್ಯಕ. ಹೌದು. ಆದರೆ ಸಂಖ್ಯಾಬಲವೊಂದೇ ಈ ಅಧಿಕಾರಕ್ಕೆ ಕಾರಣವಾದಾಗ ನ್ಯಾಯವು ಕೂಡ ಪಕ್ಷಪಾತವಾಗಬಹುದು. ಸಾಕಷ್ಟು ಬಲಗೊಂಡ ವಿರೋಧ ಪಕ್ಷವು ರಾಜಕೀಯವು ಹದಗೆಡಿಸುವುದನ್ನು ಬಹಳಮಟ್ಟಿಗೆ ತಪ್ಪಿಸಲು ಸಾಧ್ಯ.

ನವಭಾರತದ ಇಂದಿನ ವಾತಾವರಣದಲ್ಲಿ ವಿರೋಧಪಕ್ಷವು ತನ್ನ ಹೊಣೆಯನ್ನು ತೀರಿಸಬೇಕಾದರೆ, ಬುದ್ಧಿವಂತನಾದ ಜಾಣನಾದ, ಅತೀವ್ರ ದೇಶಪ್ರೇಮಿಯಾದ, ಸರ್ವರ ಮನ್ನಣೆ ಪಡೆದ ಧೀರೋದಾತ್ತನೊಬ್ಬ ನಾಯಕನಿರಲೇಬೇಕು. ಅಂತಹ ಚರಿತಾರ್ಥನಾದ ನಾಯಕರಾಗಿದ್ದರು ಕೀರ್ತಿಶೇಷ ಶ್ಯಾಮಪ್ರಸಾದ ಮುಖರ್ಜಿಯವರು.

ವಿಶಾಲ ಹಿಂದೂ ಮನೋಭಾವವನ್ನು ಪೂರ್ಣವಾಗಿ ಅರಿತಿದ್ದ ಅತನಿಗೆ, ಧ್ಯೇಯ ಸಮರ್ಥನೆಯಲ್ಲೇ ಮೋಕ್ಷದೊರಕಿತು.

ವಿಶಾಲ ಮನೋಭಾವದ ಹಿಂದೂಗಳಿಗೆ ಶ್ಯಾಮಪ್ರಸಾದರು ತಿರುಗಿ ಭಾರತದಲ್ಲಿ ಅವತರಿಸಿಯೇ ಅವತರಿಸುತ್ತಾರೆ ಎಂಬುದು ಧೃಢವಾದ ನಂಬಿಕೆ.

ಆದರೆ ಅದಾಗುವತನಕ, ಭಾರತಮಾತೆಯ ಶೋಕವನ್ನು ಪರಿಹರಿಸುವರಾರು ? ಭಾರತ ಸಂಸಾರದ ಈ ದುಃಖಕ್ಕೆ ಪರಿಹಾರವುಂಟೇ ?

ಶ್ರೀ ಕೀರ್ತಿಶೇಷ ಆಷುಟೋಷ್‌ರಂತಹ ಪ್ರತಿಭಾಸ್ವಿತರ ಕೈ ಹಿಡಿದು, ಕೀ॥ ಶ್ಯಾಮಪ್ರಸಾದರಂತಹ ಪ್ರತಿಭಾಸ್ವಿತರನ್ನು ಭಾರತಕ್ಕೆ ಕೊಟ್ಟ ಮುಖರ್ಜಿ ಮಾತೆಯ ದುಃಖದಲ್ಲಿ ನಾವೂ ಪೂರ್ಣ ಭಾಗಿಗಳು.

ಕುಹಕಿಡಿಗಳು

ಗೌರೀಶಂಕರವನ್ನು ಹತ್ತಿದ ಸಾಹಸಿದ್ವಯದ ಛಾಯಾ ಚಿತ್ರನೋಡಿದ ಮೇಲೆ ಯಾರು ತೇನ್‌ಸಿಂಗ್ ಯಾರು ಹಿಲಾರಿ ಎಂಬುವುದೇ ತಿಳಿಯುವುದಿಲ್ಲ ಅಲ್ಲವೇ?

—ಆದರೂ ಪತ್ರಿಕೆಗಳ ಗುಲ್ಲುನೋಡಿ!!

* * *

ಜನಾಬ್ ನಾಜಿಮುದ್ದೀನ್‌ರವರು ಈಗ ಮೂರು ನಾಗರಹಾವು ನಾಲ್ಕು ಕೊಳಕು ಮಂಡಲವನ್ನು ಸಾಕಲು ಶುರುಮಾಡಿದ್ದಾರೆ—ಮನುಷ್ಯರಿಗಿಂತ ಇವೇ ಸೊಗಸು, ಕ್ಷೇಮ, ಅಂತ ಹೇಳಿದರು ಎಂಬುವುದು ಖಚಿತವಲ್ಲವಂತೆ.

* * *

ರಾಜಭವನದಲ್ಲಿ ತೇನ್‌ಸಿಂಗ್‌ರ ಪತ್ನಿಯು ಅಲ್ಲಿನ ವೈಭವವನ್ನು ಕಂಡು ಅಚ್ಚರಿಗೊಂಡರಂತೆ.

—ರಾಜಭವನಕ್ಕೆ ಮೊದಲು ಬಂದಾಗ ಪತ್ನಿಯರು ಎಲ್ಲಾ ಹೀಗೆ ಅಚ್ಚರಿ ಗೊಂಡರೆಂಬುದು ಮುಕ್ಕಾಲು ಸುಳ್ಳಿರಬೇಕು.

* * *

ಬಾಸ್ರಾಕ್ಕೆ ಬರುವ ಹಡಗುಗಳು ಇರಾನಿ ಎಣ್ಣೆಯನ್ನೇ ಉಪಯೋಗಿಸಬೇಕು ಎಂದು ಅಜ್ಞೆಯಾಗಿದೆಯಂತೆ.

—ಮಂಡ್ಯದ ನೌಕರರೆಲ್ಲಾ ಮಂಡ್ಯದ ಬೆಣ್ಣೆಯನ್ನೇ ಹಚ್ಚಲು ಉಪಯೋಗಿಸ ಬೇಕೆಂದು ಅಧಿಕಾರಿಗಳು ಹುಕುಂ ಮಾಡಿದ್ದಾರೆಂಬುದು ಶುದ್ಧ ಸುಳ್ಳು.

* * *

ಅಧ್ಯಕ್ಷ ಸಿಂಗ್‌ಮನ್‌ರ್‍ಹೀ ಅವರು ಈಗ ಬಾಲ ಬಿಚ್ಚುತ್ತಿದ್ದಾರಂತೆ.

—ಸರ್ವನಾಶೆ ಸಮುತ್ಪನ್ನೇ ಯುನೋತ್ಯಜತಿ ರ್‍ಹೀಂಡಿತಃ!

* * *

ಸಿಂಗ್‌ಮನ್‌ರ್‍ಹೀಯವರು ಭಾರತವೂ ಪಂ|| ನೆಹ್ರೂವೂ ಕಮ್ಯೂನಿಸ್ಟರೆಂದು ಧೃಡವಾಗಿ ನಂಬಿದ್ದಾರಾಗಿ

ಶ್ರೀ ಎ. ಕೆ. ಗೋಪಾಲನ್‌ರವರು ಹಂಗೂ ಕೆಟ್ಟೆ ಹಿಂಗೂ ಕೆಟ್ಟೆ ರಂಗಧಾಮ ಎಂದು ಹಾಡುತ್ತಿದ್ದಾರೆ ಎನ್ನುವುದು ಶುದ್ಧ ಸುಳ್ಳಂತೆ.

ಉರಿಗಾಳು

ಒಂದು ಅಂಗುಲ ಸ್ಥಳವನ್ನೂ ಬಿಟ್ಟು ಕೊಡುವುದಿಲ್ಲ. (ಪತ್ರಿಕೆಯ ಶಿರೋನಾಮೆ)

—ಯಾರು ಹೇಳಿದವರು ಗೊತ್ತೆ?

ಅಧ್ಯಕ್ಷ ನಗೀಬ್—ಆಂಧ್ರಕೇಸರಿ—ಕನ್ನಡ ಹುಲಿ—ತಮಿಳುತೋಳ-ಕೇರಳ ಕನ್ನೆ—ಮರಾಟದ ಮರಗಜ—ಗುಜರಾತಿ ಟಗರು—ಇತ್ಯಾದಿ. ಇತ್ಯಾದಿ.

* * *

ಫ್ರೆಂಚ್ ಮಂತ್ರಿಮಂಡಲ ರಚಿಸಲು ಇನ್ನೂ ಬಿಕ್ಕಟ್ಟು—(ಶಿರೋನಾಮೆ)

—ಯಾಕೆ? ಭಾರತದಿಂದ ಮಾಜಿ ವರ್ಗದವರು ಹೇರಳವಾಗಿ ಸಿಗುತ್ತಾರಲ್ಲಾ!!

* * *

ಇಂದಿನ ಶೋಕವಾರ್ತೆ!

—ರಾಮದಾಸನ ಭದ್ರಾಚಲದಲ್ಲಿ ೧೨೩ಳಕ್ಕೆ ಉಷ್ಣಾಂಶ ಏರಿದರೂ ಕೂಡ-

—ವರಮಾನ ತೆರಿಗೆಯ ಕಚೇರಿಯು ಬೆಂಕಿ ಹೊತ್ತುಕೊಳ್ಳಲಿಲ್ಲವಂತೆ!

* * *

ಜೇಬುಗಳ್ಳರು ಈಗೀಗ ಕಡಿಮೆಯಾಗುತ್ತಿದ್ದಾರೆ. (ಪೋಲೀಸರ ಹೇಳಿಕೆ)

—ಹೌದು!! ಜೇಬು ಇಡಿಸಿಕೊಳ್ಳಲು ಸಾಕಷ್ಟು ಬಟ್ಟೆ-ಸುಲಭದರದಲ್ಲಿ ಸಿಗಬೇಕಲ್ಲಾ ಜನರಿಗೆ!!

* * *

ಮೇಜಿನ ಸುತ್ತಲೂ ಕೂತುಕೊಂಡ ಸ್ನೇಹಿತರು ಶಾಂತಿಯ ಆರಾಧಕರಾಗಬಹುದು. (ರಾಜಕಾರಣ ಪಟು)

—ಆತ ಎಂದಾದರೂ ಇಸ್ಪೀಟ್ ಆಡಿದ್ದಾನೆಯೇ??

* * *

ಮದನಪಲ್ಲಿಯ ಹತ್ತಿರ ರೈಲ್ವೆ ಅಪಘಾತ.

– ಮದನನ ಹೆಸರು ಹೇಳಿದರೇ ಅಪಘಾತ ತಪ್ಪದಲ್ಲವೇ?

* * *

ಕೊರವಂಜಿಯು ಕಣಿ ಹೇಳಿ ಹೊಟ್ಟೆ ಹೊರೆದುದರ ಫಲ

—ವರಮಾನ ತೆರಿಗೆಯವರು ನಮ್ಮ ಹೊಟ್ಟೆಯನ್ನೂ ಹೊರಿಸು ಎಂದು ಕೇಳುತ್ತಿರುವುದು.

* * *

ರಷ್ಯಾದಲ್ಲಿ ಲಾಟರಿ ಸಾಲವನ್ನು ಎತ್ತುತ್ತಾರಂತೆ.

—ಈಗಿನ ಕಾಲದಲ್ಲಿ ಸಾಲಸಿಗುವುದೇ ಲಾಟರಿ ಎತ್ತಿದಂತೇ ಅಲ್ಲವೇ?

* * *

ಇಂಗ್ಲೀಷ್ ಸುದ್ದಿಯನ್ನು ಕನ್ನಡಕ್ಕೆ ತರ್ಜುಮೆ ಮಾಡಪ್ಪಾ ಎಂದು ನಮ್ಮ ನೂತನ ಪದವೀಧರನಿಗೆ ಹೇಳಿದರೆ ಆತ "ಆಂಧ್ರಕ್ಕೆ ಲಾಯದ ಸರ್ಕಾರ" ಎಂದು ಬರೆದು ತಂದ

—ಇಂಗ್ಲೀಷಿನಲ್ಲಿ Stable Government ಎಂದಿತ್ತು!!

* * *

ಮದ್ರಾಸಿನ ಟ್ರಾಂ ಕೆಲಸಗಾರರಿಗೆ ಈಗ ರಜ ದೊರಕಿದೆ.

—ಆದರೆ ಎಲ್ಲಾದರೂ ತಿರುಗಿ ಬರೋಣ ಅಂದರೆ ಟ್ರಾಂ ಇಲ್ಲದೆ ಸಾಧ್ಯ ವಾಗಿಲ್ಲವಂತೆ.

* * *

ಸರ್ ಎಡ್ಮಂಡ್ ಹಿಲಾರಿಯವರು ಷೆರ್ಪಾ ಹುಡುಗಿಯೊಂದನ್ನು ಮದುವೆ ಯಾಗುತ್ತಾರೆಂಬುದು ಶುದ್ಧ ಸುಳ್ಳಂತೆ.

* * *

"ಷೆರ್ಪಾ ತೇನ್‌ಸಿಂಗ್‌ರವರು ಟಿಬೆಟ್ಟಿನವರು. ಅವರ ಪೂರ್ವೀಕರು ಹದಿನಾ ರಾಣೆ ರಷ್ಯನ್ನರು" ಎಂದು ಇನ್ನೂ ಪ್ರಾವ್ಡಾ ತಿಳಿಸಿಲ್ಲವಂತೆ.

* * *

ಬರ್ಮುಡಾ ಮಾತುಕತೆಗಳಲ್ಲಿ ಭಾಗವಹಿಸಲು ನಮ್ಮ ಕೇರಿಯ ಮಾತಿನ ಮಲ್ಲಯ್ಯನನ್ನೂ ಕಳಿಸಿದರೆ ನಮ್ಮೂರು ಸ್ವಲ್ಪ ದಿನಗಳಾದರೂ ಶಾಂತಿಯುತವಾಗ ಬಹುದು ಎಂದೊಬ್ಬರು ಸಲಹೆ ನೀಡಿದ್ದಾರೆ.

* * *

ಕೋಲಾರದಲ್ಲಿ ಈ ಸಾರಿ ಅ. ಕ. ಕಾಂ. ಸಭೆ ಸೇರುತ್ತದೆಯಂತೆ. ಮುಂದಿನ ತಿಂಗಳು ಅ. ಆಂ. ಕಾಂ. ಸಭೆ ಸೇರಲು ಏರ್ಪಾಡಾಗುತ್ತದೆ ಎನ್ನುವುದು ಶುದ್ಧ ಕುಹಕ.

* * *

ಬುದ್ಧಿದಾನ್ ಚಳುವಳಿ ಹೂಡುತ್ತಾರಂತೆ.

—ಹೊಟ್ಟೆಗಿಲ್ಲದ ದೇವರು ಪೂಜಾರಿಗೆ ವರ ಕೊಟ್ಟಂತೆ!!

ಶಿಖರದಿಂದಿಳಿತ

ಮೊನ್ನೆ, ನಮ್ಮ ಊರಲ್ಲಿ ಒಂದು ಮೆರವಣಿಗೆ ಆಯಿತು. ಫುಟ್‌ಬಾಲ್ ಆಟದಲ್ಲಿ, ಯಾರೋ ಒಬ್ಬರು ಗೋಲ್ ಹೊಡೆದರಂತೆ, ಅವರನ್ನ ಹೆಗಲ ಮೇಲೆ ಕೂರಿಸಿಕೊಂಡು ಊರೆಲ್ಲ ಸುತ್ತಾಡಿದರು. ಪಾಪ! ಆತ ಕೂಗುತ್ತಲೇ ಇದ್ದ, "ನನ್ನದೇನು ಜಾಣತನ, ಮಹಾ! ಆತ ಪಾಸು ಕೊಟ್ಟ, ಈತ ಆ ಕಡೆಯವನನ್ನ ತಡೆದ, ಇನ್ನೊಬ್ಬ ಎದುರುಪಾರ್ಟಿ ಫಾರ್ವರ್ಡನ್ನು ನಿಲ್ಲಿಸಿದ, ಆ ಗೋಲ್‌ಕೀಪರ್ ಎಲ್ಲೋನೋಡುತ್ತ ನಿಂತಿದ್ದ, ನಾನು ಚೆಂಡನ್ನು ಹೊಡೆದೆ, ಹೇಗೋ ಅದು ಒಳಕ್ಕೆ ತೂರಿತು, ನೀವೆಲ್ಲ ಒಗ್ಗಟ್ಟಾಗಿ ಒಂದೇ ರೀತಿಯಾಗಿ ಒಮ್ಮನಸ್ಸಿನಿಂದ ಬಹು ಜಾಣ ತನದಿಂದ ಆಡದೆ ಇದ್ದರೆ, ನಾನೇನು ಮಾಡುತ್ತಿದ್ದೆ, ನನ್ನ ಕಾಲಿಗೆ ಚೆಂಡು ತಗುಲಿ ಅದು ಓರೆಯಾಗಿ ನುಗ್ಗಿ ಗೋಲೊಳಗೆ ತೂರಿದ್ದೇ ನನ್ನ ತಪ್ಪು. ನನ್ನೊಬ್ಬನನ್ನ ಮೆರವಣಿಗೆ ಹೊರಬೇಡಿ. ಎಲ್ಲರನ್ನೂ ಹೊತ್ತುಕೊಳ್ಳಿ" ಎಂದು.

ಕ್ರಿಕೆಟ್ ಆಟವಾಯಿತು, ನಿನ್ನೆ. ನಮ್ಮ ಊರು ಬ್ರಾಡ್ಮನನ್ನು ನಮ್ಮ ಊರು ವಾಡ್ಲ್ಸ್ ಔಟ್ ತೆಗೆದ. ಸರಿ! ಅವನನ್ನೂ ಹೊತ್ತರು. ಅವನೂ ಬುದ್ಧಿವಂತ, ನ್ಯಾಯಸ್ಥ. "ನಾನೆಸೆದ ಚೆಂಡನ್ನ ಆತ ಸೊಟ್ಟಗೆ ಹೊಡೆಯುವ ಹಾಗೆ ನೀವೆಲ್ಲ ಸುತ್ತ ನಿಂತು ಹೆದರಿಸಿದಿರಿ; ಎಡಗೈ ಮೇಲೆತ್ತಿ ಬಲ ಮಂಡಿ ಬಗ್ಗಿಸಿ ಆತ ಟೊಕ್ ಎನ್ನು ತ್ತಲೂ, ಚೆಂಡು ಶಿಂಗ್ರೈಯ್ಯಂಗಾರಿ ಕಡೆ ಎಗರಿತು. ಶಿಂಗ್ರೈಯ್ಯಂಗಾರಿ ಕೈ ಯಾವಾಗಲೂ ಅವಲಕ್ಷಣ ಅಂತ ತಿಳಿದು, ನಾಗಲಿಂಗು ಅಲ್ಲಿಗೆ ಧಾವಿಸಿದ. ಅಷ್ಟ ರೊಳಗೆ, ಬ್ರಾಡ್ಮನ್ ಒಂದು ರನ್ ಕದಿಯೋಣ ಅಂತ ಹಟ್ಟನನ್ನು ಕರೆದ. ಜಾಗ ಬಿಟ್ಟ, ನಾಗಲಿಂಗು ನೇರವಾಗಿ ವಿಕೆಟ್ ಕಡೆ ಚೆಂಡನ್ನೆಸೆದ. ಅದು ಓವರ್ ತ್ರೋ ಆಯಿತು. ನಿಮಿಷಾರ್ಧದಲ್ಲಿ, ವಿಕೆಟ್‌ಕೀಪರ್ ಚಂದ್ರು ಚೆಂಡಿನ ಹಿಂದೆ ಗ್ಯಾಲಪಿ, ಅದನ್ನು ಎತ್ತಿ, ಬ್ರಾಡ್‌ಮನ್ ತಲಪುವುದರೊಳಗೆ ಹಟ್ಟನ್ ಹೊರಡುವುದರೊಳಗೆ ವಿಕೆಟ್‌ಗೆಸೆದು ಅದನ್ನು ಬೀಳಿಸಿದ. ಇದರಲ್ಲಿ, ನಾನೇನು ಮಹಾ! ಹನ್ನೊಂದು ಜನವೂ ಸೇರಿ ಬೀಳಿಸಿದ ವಿಕೆಟ್ ಅದು. ನಾನು ನಿಮಿತ್ತಮಾತ್ರ! ಇಳಿಸಿರೋ, ಎತ್ತರದಲ್ಲಿ ಕೂತಿರಲಾರೆ" ಎಂದು ಆತ ಕೂಗಿದ. ನ್ಯಾಯ, ಅವನ ಮಾತು.

ನಮ್ಮೂರು ಮಾವಿನ ತೋಪಿನಲ್ಲಿ, ಒಂದು ಭಾರಿ ಮರ. ನೂರಾರು ಕೊಂಬೆತುಂಬ ಎಲೆ, ಕಾಯಿ ತುತ್ತತುದಿಯಲ್ಲಿ ಎರಡು ಕಾಯಿ ಗಾಳಿಗೆ ತೂಗುತ್ತ


ಮಳೆಯಲ್ಲಿ ನೆನೆಯುತ್ತ, ಬಿಸಿಲಲ್ಲಿ ಮಾಗುತ್ತ ಕಾಣಿಸಿತು. ನಮ್ಮೂರಿನವರೆಲ್ಲರಿಗೂ, ಅದೇ ಆಶ್ಚರ್ಯ! "ನೋಡಿರೋ! ಅವೆರಡೂ ಎಂಥ ಸಾಹಸಮಾಡಿವೆ! ಇವೆರಡರ ಪೈಕಿ, ಈ ಕಡೆಯದು, ಹಾಂ, ಅದು, ಆ ಇನ್ನೊಂದಕ್ಕಿಂತ ತುಸು ಮೇಲು" ಎಂದು ಜಗಳ ಆಡುವರು. ಆದರೆ, ಅವಕ್ಕೆ ಗೊತ್ತು, ಬೇರುಗಳ ಮಹತ್ವ, ಬುಡದಬೆಲೆ, ಕೊಂಬೆಗಳ ಕಷ್ಟ, ರೆಂಬೆಗಳ ಅವಶ್ಯಕತೆ, ಎಲೆಗಳ ಪಾತ್ರ.

ಟೇನ್‌ಸಿಂಗ್, ಹಿಲ್ಲಾರಿ, — ಯಾರು ಮೊದಲು ಎವರೆಸ್ಟ್ ಶಿಖರದ ಮೇಲೆ ಕಾಲಿಟ್ಟರು, ಎಂಬ ಚರ್ಚೆ ಬೇಕಾಗಿರುವುದು, ಟೇನ್‌ಸಿಂಗ್ ಇಂಡಿಯಾದವನು, ಹಿಲ್ಲಾರಿ ಇಂಡಿಯಾದವನಲ್ಲ, ಎಂಬ ಚಿಕ್ಕಮನಸ್ಸಿನ ನಮಗೆ. ಸಾಹಸಿಗಳು, ವೀರರು ಮಾನವ ಕುಲದ ಮಾಣಿಕ್ಯಗಳು, ಎಂದು ಹೆಮ್ಮೆಪಡುವವರು ಅವರಿಬ್ಬರಲ್ಲಿ ಭೇದ ವೆಣಿಸುವುದಿಲ್ಲ— ಹಿಲ್ಲಾರಿಯ ಸಹಾಯವಿಲ್ಲದೆ ಟೇನ್‌ಸಿಂಗ್ ಹತ್ತಿರಲಾರ; ಟೇನ್ ಸಿಂಗನ ಸಹಾಯವಿಲ್ಲದೆ, ಹಿಲ್ಲಾರಿ ಹತ್ತಿರಲಾರ, ಶಿಖರದ ಕೆಳಗಿನ ಸಾಲು ಬಿಡಾರ ಗಳಲ್ಲಿದ್ದ ಇತರ ಆರೋಹಿಗಳ ಸಹಾಯವಿಲ್ಲದೆ, ಶಿಖರವನ್ನು ಗೆಲ್ಲುವುದಸಾಧ್ಯ. ಹಿಂದಿನ ವರ್ಷಗಳಲ್ಲಿ, ಪರ್ವತಾರೋಹಣಮಾಡಿ, ಸೋತು, ಹಿಂತಿರುಗಿದವರ ಅನು ಭವ ಸಾಮಗ್ರಿಯೇ ಈಗಿನವರಿಗೆ ಕೈಮರ.

ಟೇನ್‌ಸಿಂಗ್ ಹಿಲ್ಲಾರಿ ಇವರಿಬ್ಬರ ಪೈಕಿ, ಯಾರು ಮೊದಲು ಆ ಶಿಖರದ ಮೇಲೆ ಕಾಲಿಟ್ಟರು, ಎಂಬ ಚರ್ಚೆಯಿಂದ, ಟೇನ್‌ಸಿಂಗನ ಮನ ನೊಂದಿದೆಯಂತೆ; ಆತ, ಇಂಗ್ಲಂಡಿಗೆ ಹೋಗದೆ ಇರುವುದಕ್ಕೆ ಅದೇ ಕಾರಣವಂತೆ. ಎವೆರೆಸ್ಟ್ ಶಿಖರ ವನ್ನು ಯಾಕಪ್ಪ ಹತ್ತಿದೆ, ಎಂಬ ಪ್ರಶ್ನೆಗಿಂತ, ಈಗ ಆತನನ್ನು ಬಾಧಿಸುತ್ತಿರುವ ಪ್ರಶ್ನೆ,—ಎವೆರೆಸ್ಟ್ ಶಿಖರದಿಂದ ಯಾಕಪ್ಪ ಇಳಿದೆ. ಎಂಬುದಾಗಿದೆ

—ಪಾಟಾಳಿ.

—o—



ಕುಣಿದಳಾಹೃದಯೇಶ್ವರಿ!

[ಹರಿಹರಾಯನಮಃ]

ಆಡುವ ಗುಂಡಮ್ಮನ ಹೊಸ ನೃತ್ಯಂ
ನೋಡುವ ಗುಂಡಪ್ಪನ ಮುಟ್ಟಿತು ಸತ್ಯಂ
ಪತಿನೋಟಂ ತನ್ನಂ ಬೆಂಬತ್ತಲು
ಸತಿಸುಖದಿಂದಂ ಮೊಗಮಂ ಎತ್ತಲು
ಕೃಶ ಭುಜಮಂಪಾಡುತ್ತಲ್ ನಿಮಿರಿಸಿ
ಕರಿಯ ಕರಂಗಳನೆತ್ತಲ್ ತಿರಿಗಿಸಿ
ಒಂದು ಪದಂ ಜಮುಖಾನವನೊತ್ತಲ್
ಒಂದು ಪದಂ ಸುತ್ತಲು ಚಾಚುತ್ತಲ್
ಜಡೆಗಳ್ ಚೇಳುಗಳಂದದಿ ಜೋಲಾಡುತ್ತಿರೆ
ಮುಡಿಯೋಳ್ ಜೆನಿಯಾಹೂಸರ ತೂಗಾಡುತ್ತಿರೆ
ನೊಸಲೋಳ್ ತಾರೆಯ ಕಳೆ ತುಳ್ಕಾಡುತ್ತಿರೆ
ನಿಡು ಜೋಲ್ವಾಳಿಕಂ ಕುಣಿದಾಡುತ್ತಿರೆ
ಮಿನುಗುವ ಮೂಗತಿ ಥಳ್ ಥಳ್‌ಲೆನೆ
ಮಿಸುಗುವ ಗೆಜ್ಜೆಯು ಕಟ್ಟಿದ ಪಾದಂ ತಿರ್‍ರನೆ
ತಿರುಗುತ್ತಿರೆ ಆಗಳ್ ಕೊಡೆ ಎತ್ತಲು
ಬಣ್ಣದ ವಾಯಲ್ ಮುಖಮಂ ಅರೆಮುಚ್ಚಲು
ಕಾಲ್ಗೆಜ್ಜೆಗಳ ರವಂ ಘುಲು ಘುಲು ರೆನೆ
ಮುಂಗೈ ಬಳೆ ಕಣಕಣ ಕಣಲೆನೆ
ಆಡಿದ ನಾಡಿದಳಾಹಾ ಪ್ರಾಣೇಶ್ವರಿ
ಕುಣಿದಳಾ ಗುಂಡನ ಹೃದಯೇಶ್ವರಿ!

—ಹಾ. ರಾ.

—o—

"ಬದುಕು ಮಾರ್ಗ"

ಬೆಂಗಳೂರಿಗೆ ಹೋಗಿ ಹೋಟಲಿಟ್ಟು ಚಿನ್ನದ ಧೋಡಾ ಹಾಕೇಹಾಕ್ತೇನೆ ಅಂದಾಗ ನಾಗಪ್ಪಯ್ಯನ್ನ ನೋಡಿ ಹಳ್ಳಿಯವರೆಲ್ಲರೂ ನಕ್ಕರು. "ಏನು ಹುಚ್ಚನೋ ನೀನು. ಒಂದು ಹೆಚ್ಚುಕಟ್ಟೆಳೆ ಮನೆಯಲ್ಲಾದರೆ ನಾಲ್ಕು ಅಡಿಗೆ ಮಾಡಲು ಬರುವುದಿಲ್ಲ. ಇನ್ನೂ ಬೆಂಗಳೂರಿಗೆ ಹೋಗಿ, ಆ ಗುಜರಾತಿ ಹೋಟಲಿನವರು, ಆ ಸಿಂಧಿ ಮಿರಾಯಿಗಾರರು, ದೇವರಾಯ ಸಮುದ್ರದ ಕಡೆಯ ಸುಪ್ರಸಿದ್ಧರು, ಹಾಗೂ ಹಣ ಸಂಪಾದಿಸಿ ಹೆಸರಾಂತ ನಿನ್ನೂರ ದಾಯಾದಿಗಳು ಇವರೆಲ್ಲರೂ ಜಾದೂ ಮಾಡುತ್ತಿರುವಾಗ ಒಂದು ಸೌಟು, ಒಂದು ತುಂಡು ತೆಗೆದುಕೊಂಡು ಹೋಗಿ ನೀನು ಹೇಗೆ ಬಾಳುತ್ತೀಯೆ? ಇದ್ದಬದ್ದ ದುಡ್ಡು ಪೋಲುಮಾಡಿ ಪೋಲಿಯಾಗ್ತಿ ಅಷ್ಟೆ!" ಎಂದು ಹಾಸ್ಯಮಾಡಿ ಆಡಿದರು.

ಆದರೆ ನಾಗಪ್ಪಯ್ಯ ಜಗ್ಗಲಿಲ್ಲ. ನಗೋರು ನಗಲಿ ನಾನು ನನ್ನ ಪ್ರಯತ್ನ ಸಾಂಗವಾಗಿ ನೆರವೇರಿಸಿಯೇ ನೆರವೇರಿಸುತ್ತೇನೆ ಎಂದು ತಂದೆಯನ್ನ ತಾಯಿಯ ಮೂಲಕ ಗೋಳು ಹುಯ್ದುಕೊಂಡು ಕಡೆಗೆ ಎರಡು ಸಾವಿರ ರೂಪಾಯಿ ಬಂಡವಾಳ ತೆಗೆದುಕೊಂಡು ಬೆಂಗಳೂರಿಗೆ ಬಂದು ಒಂದು ಸಣ್ಣ ರಸ್ತೆಯಲ್ಲಿ, ಕಾರ್ಮಿಕರಿರೋ ಕಡೆ ಸಣ್ಣ ಹೋಟಲೊಂದಿಟ್ಟ. ತಾನೇ ಅಡಿಗೆಯವ; ತಾನೇ ಸರಬರಾಜಿಗ; ತಾನೇ ಕಾಸು ತೆಗೆದುಕೊಳ್ಳುವ ಗಲ್ಲದ ಮೇಲೆ ಕೂರುವ.

ಬೆಂಗಳೂರಿನ ರುಚಿ ರುಚಿ ತಿಂಡಿಗಳ ಜತೆಗೆ ತಾನು ಪೈಪೋಟಿ ಮಾಡುವುದು ಅಸಾಧ್ಯ. ಆದ್ದರಿಂದ ಪಾನೀಯಗಳ ಅಂಗಡಿ ಇಡೋದು. ತಾನಿರುವ ಕಾರ್ಮಿಕರ ಕೇರಿಗೆ ಅನುವಾಗಿ ರಾಗಿ ಅಂಬಲಿ; ಅರಳ್ಹಿಟ್ಟು ಮೊಸರು, ಮೆಣಸಿನ ಹಾಲು, ಈ ರೀತಿ ಸುಲಭ ದರದ ಪಾನೀಯಗಳನ್ನು ತಯಾರಿಸಿದ. ಪಾನೀಯಗಳು ವ್ಯಾಪಾರ ಆದರೆ ಅನಂತರ ಹಳ್ಳಿ ತಿಂಡಿಗಳನ್ನು ಸೇರಿಸೋಣ ಪಟ್ಟಿಗೆ, ಎಂದು ನಿರ್ಧರಿಸಿದ.

ಮೂರು ತಿಂಗಳು ಒಂದೇ ಸಂಕಲ್ಪದಿಂದ ದುಡಿದ.

ನಾಗಮಂಗಲದ ಉತ್ತರಕ್ಕಿರುವ ಪಂತರಕೇರಿಯಲ್ಲಿ ರಾಮಾಶಾಸ್ತ್ರಿ ತನ್ನ ತಂದೆಯೊಂದಿಗೆ ಮಾತು ಬೆಳೆಸಿದ್ದ. "ಈ ಹಳ್ಳಿಯಲ್ಲಿ ಎಷ್ಟು ದುಡಿದರೂ ಬದುಕುವ ಹಾಗಿಲ್ಲ ನೀನು ಹೇಳಿಕೊಟ್ಟ ಆಯುರ್ವೇದವನ್ನೆಲ್ಲಾ ಇಲ್ಲಿ ಉಪಯೋಗಿಸಲು

ಅವಕಾಶವೇ ಇಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವೈದ್ಯರ ವಂಶದಲ್ಲಿ ಹುಟ್ಟಿದ್ದಕ್ಕೆ ಇದೇನೇಗತಿ, ನಾನು ಬೆಂಗಳೂರಿಗೆ ಹೋಗಿ ಆಯುರ್ವೇದದ ಅಂಗಡಿ ಇಟ್ಟು, ನಮ್ಮ ವಂಶದ ಕೂಟಸ್ಥ ಸ್ವರ್ಗದಲ್ಲಿ ಭಲೇ ಭೇಷ್ ಅನ್ನುವಂತೆ, ಬಾಳಲೇ ಬೇಕು" ಎಂದು ಹೇಳುತ್ತಿದ್ದ.

ಅವರ ತಂದೆ ನಿಧಾನವಾಗಿ, ಸಾವಧಾನವಾಗಿ ಹೇಳುತ್ತಿದ್ದರು "ಕೆಟ್ಟು ಪಟ್ಟಣ ಸೇರು ಎಂದು ತಿಳಿದವರು ಹೇಳುತ್ತಾರೆ. ನೀನು ಇನ್ನೂ ಕೆಟ್ಟಿಲ್ಲ. ಯಾಕೆ ಪಟ್ಟಣದ ಮೋಹಕ್ಕೆ ಬಲಿಯಾಗಿದ್ದೀ! ಇರಲು ಒಂದು ಗುಡಿಸಲಿದೆ. ಉಣ್ಣುಕ್ಕೆ ತಿನ್ನುಕ್ಕೆ ಸಾಕಷ್ಟು ಇದೆ. ಮೇಲ್ ಖರ್ಚಿಗೆ ಬೇಕಾದಷ್ಟು ಮೇಲ್ಸಂಪಾದನೆ ಇದೆ. ಊರಿನವರಿಗೆ ಬೇಕಾದವರಾಗಿದ್ದೇವೆ. ಇದೆಲ್ಲಾ ಬಿಟ್ಟು ಆ ಹಾಳು ಪಟ್ಟಣದ ಕೊಂಪೇಗೆ ಹೋಗಿ ಏನು ತಾನೇ ಮಾಡಬಲ್ಲೆ. ಇಲ್ಲೇ ಸುಖವಾಗಿ ಅಪ್ಪ ಹಾಕಿದ ಆಳಲೇಕಾಯಿ ಮರವನ್ನೇ ಬೆಳೆಸಿಕೊಂಡು ಬಾಳು" ಎಂದು ಇನ್ನಿಲ್ಲದ ಹಾಗೆ ಹೇಳಿದರು.

ಚಿಗುರುಮೀಶೆ ಬಂದ ರಾಮಾಶಾಸ್ತ್ರಿ ಹಿರಿಯರ ಮಾತು ಕೇಳುತ್ತಾನೆಯೇ? ತಾನು ಹಿಡಿದ ಹಠವನ್ನೇ ಸಾಧಿಸಿದ. ಸಾವಿರ ರೂಪಾಯಿ ಬಂಡವಾಳ ತೆಗೆದು ಕೊಂಡು ಬೆಂಗಳೂರಿಗೆ ಬಂದು ಆಯುರ್ವೇದದ ಅಂಗಡಿಯೊಂದನ್ನು ತೆರೆಯಲು ಅಣಿಮಾಡಿದ. ನಾಗಪ್ಪಯ್ಯನ ಪಾನೀಯ ಮಂದಿರದ ಪಕ್ಕದ ಲಾಯವೇ ಇವನಿಗೆ ಲಭ್ಯವಾದುದು. ಅಲ್ಲೇ ಕಲ್ಲುಪತ್ತುಗಳು, ಲೇಹದ ಬಾಟಲಿಗಳು, ಆಸವಗಳು. ಇತ್ಯಾದಿ ಎಲ್ಲವನ್ನು ನವರಾತ್ರೀಲಿ ಬೊಂಬೆ ಇಡೋ ಹಾಗೆ ವಾರಣವಾಗಿ ಇರಿಸಿದ.

ಮೂರು ತಿಂಗಳು ಹಲ್ಲು ಕಚ್ಚಿಕೊಂಡು ದುಡಿದ.

ಮೂರು ತಿಂಗಳು ಇವರಿಬ್ಬರೂ ದುಡಿದರು ಅಂದರೆ ಏನು ಅಂತೀರಿ? ದಿನಾಲು ಬೆಳಗಾಗುತ್ತಲೂ ಬಾಗಿಲು ತೆಗೆದು ಅಂಗಡಿಯನ್ನ ಗುಡಿಸಿ ಸಾರಿಸಿ ರಂಗೋಲಿ ಇಟ್ಟು ಕೆಲಸಕ್ಕೆ ಸಿದ್ಧವಾಗೋದು. ಬಂದ ಒಬ್ಬಿಬ್ಬರನ್ನು ವಿನಯವಾಗಿ ಮಾತನಾಡಿಸಿ ಮೆಚ್ಚಿಸಲು ಪ್ರಯತ್ನಪಡೋದು. ಅವರುಗಳೂ ತಾವು ಬಂದ ಕೆಲಸ ಮುಗಿಸಿ ಕೊಂಡು ಸಾಲ ಹೇಳಿ ಹೊರಟು ಹೋಗೋದು.

ಬಂಡವಾಳದಲ್ಲಿ ಇನ್ನು ನೂರು ನೂರು ರೂಪಾಯಿ ಉಳಿದಿತ್ತು ಇಬ್ಬರ ಹತ್ತಿರ ಲೂನೂ, ಮೂರು ತಿಂಗಳಾದ ಮೇಲೆ. ಆ ವೇಳೆಗೆ ಇಬ್ಬರೂ ಗಾಢ ಸ್ನೇಹಿತರಾಗಿ ಬಿಟ್ಟಿದ್ದರು. ಒಬ್ಬರ ಕಷ್ಟ ಒಬ್ಬರಿಗೆ ಹೇಳಿಕೊಂಡು, ಹಿರಿಯರು ಹೇಳಿದ ಬುದ್ಧಿವಾದ ಜ್ಞಾಪಿಸಿಕೊಂಡು, ತಮ್ಮ ಮೂರ್ಖತೆಗೆ ತಾವೇ ಪಶ್ಚಾತ್ತಾಪ ಪಟ್ಟುಕೊಂಡು, ಬಂದ ದಾರಿಗೆ ಸುಂಕವಿಲ್ಲ, ಹಿಂತಿರುಗಿ ಊರಿಗೆ ಹೋಗಿ ಅದೇ ಬಂದೇನ್ ಕದ ತೆಗೀರಿ ಅಂತ ಮನೆ ಸೇರಿಕೊಳ್ಳೋದೇ ಲೇಸು. ಈ ಹಾಳು ಪಟ್ಟಣದಲ್ಲಿ ಥಳುಕಿಲ್ಲದೆ

ಇದ್ದರೆ ವ್ಯಾಪಾರ ನಡೆಯೋದೇ ಇಲ್ಲ. ನಮಗೋ ಥಳುಕು ತಿಳಿಯದು ಎಂದು ಮಾತನಾಡಿಕೊಂಡರು.

ರಾಮಾಶಾಸ್ತ್ರೀಗೆ ಏನೋ ಹೊಳೆಯಿತು. "ಅಲ್ಲಾ ! ನಾಗಪ್ಪಯ್ಯ ಊರಿಗೆ ಹೋಗುವುದಕ್ಕೆ ಕಾಲೇ ಬರುವುದಿಲ್ಲ. ನನಗೆ ಒಂದು ಯೋಚನೆ ಬರ್ತಾ ಇದೆ. ನಿನ್ನಂಗಡೀನ ಒಂದು ತಿಂಗಳು ನಾನು ನಡೆಸುತ್ತೇನೆ. ನನ್ನ ಅಂಗಡೀನ ನೀನು ಒಂದು ತಿಂಗಳು ನಡಿಸು ಅಲ್ಲಿಗೂ ನಾವು ಸಂಪಾದಿಸಲಾರದೆ ಹೋದರೆ ಸೋಲ ನ್ನೊಪ್ಪಿ ಊರಿಗೆ ವಾಪಸಾಗೋಣ ಎಂದ.

ಊರಿಗೆ ಹಿಂತಿರುಗುವುದು ಒಂದು ತಿಂಗಳು ತಡೆದರೆ ತನಗೇನೂ ನಷ್ಟವಿಲ್ಲ ಎಂದು ನಾಗಪ್ಪಯ್ಯ ಒಪ್ಪಿದ.

ಮಾರನೆ ದಿನದಿಂದ ಇವನ ಅಂಗಡೀಲಿ ಅವನು, ಅವನಂಗಡೀಲಿ ಇವನು ಹೀಗೆ ವರ್ಗಾಯಿಸಿಕೊಂಡರು.

ಪಾನೀಯ ಮಂದಿರಕ್ಕೆ ಆ ಬೆಳಿಗ್ಗೆ ಬಂದ ಮುನ್ಸಾಮಿ ಮುಖ ನೋಡಿ ರಾಮಾ ಶಾಸ್ತ್ರಿ ಹೇಳಿದ. ಅಯ್ಯಾ! ಮುನ್ಸಾಮಿ ಇವತ್ತು ನಿನ್ನ ಮುಖ ನೋಡಿದ್ರೆ ಪಿತ್ತ ನಿನ್ನೆ ಸಾಯಂಕಾಲ ಹೆಚ್ಚಾಗಿತ್ತು ಎಂದು ಕಾಣಬರುತ್ತದೆ. ಇದಕ್ಕೆ ಸೊಗದೇ ಬೇರಿನ ಷರಬತ್ತು ಮಾಡಿದ್ದೇನೆ. ನಳ, ದಮಯಂತೀನ ನೋಡಿದಾಗ, ಇದೇ ಷರಬತ್ತನ್ನೇ ಕುಡಿದ ಅಂತ ನಮ್ಮ ತಾತಂದಿರು ಹೇಳುತ್ತಿದ್ದರು. ಒಂದು ಥಂಡಾ ಲೋಟ ಕುಡಿದು ನೋಡು ಎಂದರು. ಮುನ್ಸಾಮಿ ಕುಡಿದ. ನಳ ದಮಯಂತಿ ಜ್ಞಾಪಕ ಬಂತೋ ಏನೋ, ಥಳುಕಿನ ಹೋಟಲಿನಲ್ಲಿ ಮಾಡಿದಂತೆ ಕಿಸೆ ತೆಗೆದು ಕಾಸುಕೊಟ್ಟು ಹೊರಟು ಹೋದ, ನಗುನಗುತ್ತಾ.

ಅರ್ಧಗಂಟೆಯಲ್ಲೇ ಆರು ಜನ ಬಂದರು. "ರೀ ಆ ನಳ ಕುಡಿದ ಷರಬತ್ತು, ಮುನ್ಸಾಮಿ ಕುಡಿದ ಷರಬತ್ತು ನಮಗೂ ಒಂದೊಂದು 'ಕಪ್' ಕೊಡ್ರಿ ಎಂದು, ಕಾಸು ಬಿಸಾಕಿದರು. ತಿಳಿಯಾದ ರಾಗಿ ಅಂಬಲೀಲಿ ಸೊಗದೇ ಬೇರಿನ ತುರಿ ತೇಲಾಡುತ್ತಿದ್ದ 'ಕಪ್'ಗಳು ಖಾಲಿಯಾದುವು. ಆ ದಿನವೆಲ್ಲಾ ನಳ ಕುಡಿದ ಷರಬತ್ತೇ ವ್ಯಾಪಾರ. ಸಾಯಂಕಾಲದ ಹೊತ್ತಿಗೆ ಇಪ್ಪತ್ತು ರೂಪಾಯಿ ನಗದು ಸಂಪಾದನೆ.

ಇತ್ತ ನಾಗಪ್ಪಯ್ಯ ಕಲ್ಲುಪತ್ತಿನ ಮುಂದೆ, ಚಕ್ಕಳ ಮಟ್ಟೆಗೆ ಹಾಕಿ ಕುಳಿ ತಿದ್ದಾನೆ. ವಡಿವೇಲು ಬಂದ ಏನೋ! ಪಂಡಿತರೇ! ಹೊಟ್ಟೆ ಗುರಗುರ ಅನ್ನುತ್ತೆ ಎಂದ. "ಅವನು ಬಾಯಿ ಬಿಟ್ಟಾಗಲೇ ಆ ಮೀನು ತಿನ್ನುವಾಗ, ಅರೆ ಬೆಂದ ಮಿನನ್ನು ತಿಂದೆ. ಅದನ್ನು ನ್ಯಾಯವಾಗಿ ಅರೆಕಾವಿನ ಎಣ್ಣೆಯಲ್ಲಿ ಕರಿದಿರ

ಬೇಕಾದ್ದು. ಒಂದು ಚಿಟಕೆ ಅರಿಶಿನ, ಒಂದು ಹರಳು ಹಿಂಗು ಹಾಕಬೇಕಾಗಿತ್ತು. ಅದು ಮಾಡಲಿಲ್ಲ ಆದಕ್ಕೇ ವಿಾನು ಈಗ ನಿನಗೆ ತ್ರಾಸು ಮಾಡುತ್ತಿದೆ. ಇದಕ್ಕೆ ವಿಾನಾರಿಷ್ಟ ಎಂಬ ಲೇಹವೊಂದನ್ನು ಕೊಡುತ್ತೇನೆ, ಎಂದು ಬಾಣಂತಿ ಲೇಹವನ್ನು, ಬಿಡಿ ಎಲೆಯಲ್ಲಿಟ್ಟು ಕೊಟ್ಟ. ವಡಿವೇಲು ಅದನ್ನು ತಿಂದ. ಎರಡು ಸಾರಿ ತೇಗಿದ.

ಎರಡೇ ನಿಮಿಷದಲ್ಲಿ ಹೊಟ್ಟೆ ಉಬ್ಬರ ಇಳಿಯಿತು ಹೊಟ್ಟೆ ದೋಣಿಯಂತೆ ತೆಳ್ಳಗಾಯಿತು. ಈ ವಿಾನಾರಿಷ್ಟ ಲೇಹ ಹೇಗೆ ಮಾಡಿದೆಯಯ್ಯಾ ಎಂದು ಕೇಳಿದ ವಡಿವೇಲು.

ಇಂದ್ರಜಿತುವನ್ನು ಹೆತ್ತಮೇಲೆ ಮಂಡೋದರಿ ಹೊಟ್ಟೆ ಸಂಕಟ ಅಂದಾಗ ಈ ಲೇಹವನ್ನೇ ತಿಂದಳಂತೆ ಅಥರ್ವಣ ವೇದದಲ್ಲಿ ಇದನ್ನು ಮಾಡೋ ವಿಧಾನ ಹೇಳಿದೆ ಅದರಂತೆ ನಮ್ಮ ಮನೆಯಲ್ಲಿ ತಲೆತಲಾಂತರದಿಂದ ಯಾರಿಗೂ ತಿಳಿಸದೆ ನಾವು ಮಾಡುತ್ತಿದ್ದೇವೆ ಈ ಲೇಹದ ತಯಾರಿಕೆಯಲ್ಲಿ ಬಾಂಡ್ಲೆ ಕಾವೇ ಮುಖ್ಯ. ತುಸ. ಹೆಚ್ಚಾದರೆ ಕೆಡುತ್ತು, ತುಸು ಕಡಿಮೆಯಾದರೆ ಹದತಪ್ಪಿತು. ಖರಾರುವಾಕ್ಕಾಗಿ ಬಾಂಡ್ಲೆ ಕಾವು ಇರಿಸಬೇಕು ಆಗಲೇ ಇದು ಇಷ್ಟು ಸೊಗಸು ಎಂದು ನಾಗಪ್ಪಯ್ಯ ಜಂಭಕೊಚ್ಚಿದ.

ವಡಿವೇಲು ಎಂಟಾಣೆ ಕೊಟ್ಟು ನಮಸ್ಕಾರ ಹೇಳಿ ಹೊರಟ. ಇನ್ನರ್ಧ ಗಂಟೆಯಲ್ಲಿ ಯಥಾ ಪ್ರಕಾರ ಇನ್ನಾರುಜನ ಬಂದರು ಮಂಡೋದರಿ ತೊಗೊಂಡ ಲೇಹ ಕೊಡ್ರಿ, ವಡಿವೇಲೂಗೆ ಕೊಟ್ಟ ಲೇಹ ಕೊಡ್ರಿ ಎಂದು ಒಮ್ಮೆಲೇ, ಮೂರು ರೂಪಾಯಿ ಎಸೆದು ಆರು ಗೋಳಿಗಾತ್ರ ಬಾಣಂತಿಲೇಹವನ್ನು ಬಿಡಿ ಎಲೆ ಮೇಲೆ ಹಾಕಿಸಿ ಕೊಂಡು ತಿಂದು ತೇಗಿ ಹೋದರು

ನಾಗಪ್ಪಯ್ಯ ಆ ದಿನ ಇಪ್ಪತ್ತು ರೂಪಾಯಿ ನಗದು ಸಂಪಾದಿಸಿದ್ದ....

ಅಂಗಡಿಗಳು ಮುಚ್ಚೋ ಹೊತ್ತು ಸಾಮಾನ್ಯವಾಗಿ ಏಳು ಗಂಟೆ, ಆ ಕೇರೀಲಿ. ತದನಂತರ ಆ ಕೇರಿಯವರೆಲ್ಲಾ ಕೆರೆ ಏರಿಯ ಮೇಲಿನ ಅಂಗಡೀಲೀನೇ!

ಆದರೆ ಆದಿನ ಅಂಗಡಿ ಮುಚ್ಚೋವಾಗ ಒಂಭತ್ತಾಗಿತ್ತು. ಇಬ್ಬರೂ ಸಂಧಿಸಿ ದರು ಕಿವಿಯಿಂದ ಕಿವಿ ತನಕ ನಗು ಇಬ್ಬರ ಮುಖದಲ್ಲೂ. ಹಣೆ ಮೇಲೆ ಸಂದೇಹ ಆಶ್ಚರ್ಯ. ಈ ನಸೀಬು ಇನ್ನೆಷ್ಟು ದಿನ ಇರುತ್ತೆ ಎಂದು. ಒಬ್ಬರೊಬ್ಬರಿಗೆ ಆ ದಿನ ನಡೆದದ್ದನ್ನೆಲ್ಲಾ ಹೇಳಿದರು. ಇನ್ನೊಂದೆರಡು ತಿಂಗಳು ಹೀಗೇ ನಡೆದರೆ ನಮ್ಮ ನಷ್ಟಗಳೆಲ್ಲಾ ನೀಗಿ, ನಾವೂ ತಲೆಯೆತ್ತ ಬಹುದು ಎಂದಂದುಕೊಂಡರು.

ಬದುಕುವ ಮಾರ್ಗ ಯಾವುದು ಎಂದು ಯಾರಿಗೆ ಗೊತ್ತು? ಇಬ್ಬರಿಗೂ ದಿನೇ ದಿನೇ ಸಂಪಾದನೆ ಬಲಿಯ ಹತ್ತಿತು, ಇಬ್ಬರೂ ಆರು ತಿಂಗಳಲ್ಲಿ ತೋಳಿಗೆ

ಧೋಡಾ ಮಾಡಿಸಿಕೊಂಡರು. ಇಬ್ಬರೂ ಅರೆ ಅರೆಮನೆಯನ್ನು ಒಟ್ಟಾಗಿ ಕಟ್ಟಿಸಿ ಬಾಳ ತೊಡಗಿದರು. ಎರಡೇ ವರ್ಷದಲ್ಲಿ, ಸಾವಿನ ಸುಂಕ ಮಕ್ಕಳಿಗೆ ತಪ್ಪಿಸ ಬೇಕಾದರೆ ಏನು ಮಾಡಬೇಕು ಎಂದು ಯೋಚಿಸ ತೊಡಗಿದರು.

ಈಗೀಗ ಆ ಅನಾಮಧೇಯ ಕೇರಿಯ ಪಾನೀಯ ಮಂದಿರದೆದುರಿಗೆ ಹದಿ ನಾರಡಿ ಮೋಟಾರುಗಳು ನಿಂತಿರುತ್ತವೆ. ರಾಮಾಶಾಸ್ತ್ರಿಯು ಅಂದಿದ್ದನ್ನೆಲ್ಲಾ ಅನ್ನಿಸಿಕೊಂಡು, ಆ ನಳ ಕುಡಿದ ಷರಬತ್ತು ಕೊಡಿ ಎಂದು ಕೇಳುತ್ತಿರುತ್ತಾರೆ. ಈಗೀಗ ಕಾಗದದ ಬಟ್ಟಲುಗಳಲ್ಲಿ ಷರಬತ್ತು ಸರಬರಾಜಾಗುತ್ತಿದೆ.


ಅನಾಮಧೇಯ ಕೇರಿಯ ಆಯುರ್ವೇದದ ಅಂಗಡಿಯ ಮುಂದೆ ಹದಿನೆಂಟಡಿ ಮೋಟಾರುಗಳು ನಿಂತಿರುತ್ತವೆ. ಕೆಲವು ವೇಳೆ ಅಲ್ಲಿಗೆ ಬರುವ ಬಸ್ಸುಗಳ ಮೇಲೆ, "ನಾಗಪ್ಪಯ್ಯನ ಆಯುರ್ವೇದದ ಅಂಗಡಿಗೆ" ಎಂದು ಬೋರ್ಡುಕೂಡಾ ಇರುತ್ತದೆ.

ಮಂಡೋದರಿ ಲೇಹವನ್ನು ಬಿಡಿ ಎಲೆ ಮೇಲೆ ಕೊಳ್ಳಲು ದಶಕಂಠಗಳು ಒಟ್ಟಿಗೇ ಕೂಗಿಡುತ್ತವೆ. ನಾಗಪ್ಪಯ್ಯ ಬೈದರೂ ಬೇಸರಪಟ್ಟುಕೊಳ್ಳುವುದಿಲ್ಲ.

ಬದುಕುವ ಮಾರ್ಗ ಹೀಗೆ ಹೀಗೆ ಎಂದು ಯಾರೂ ಹೇಳುವಂತಿಲ್ಲ. ನಾಗಪ್ಪಯ್ಯ ರಾಮಾಶಾಸ್ತ್ರಿ ಈಗಲೂ ಹೇಳುತ್ತಾರೆ. "ಕಲಿತ ವಿದ್ಯೇಲಿ ಬದುಕು ಸಾಗದೇ ಇದ್ದರೆ, ಖಂಡಿತ ಕಲಿಯದೇ ಇದ್ದ ವಿದ್ಯೇಲಿ ಲಕ್ಷ್ಮಿ ವಲಿದೇ ವಲಿಯುತ್ತಾಳೆ" ಅಂತ

—ಕುಮಾರ್.

೧



ಬಳ್ಳಾರಿ ಬಳಿ: ಛಕ್ರಿ ಕೊಟ್ಟಾರೆ, ಅನ್ನ ಕೊಡ್ಲಿಲ್ಲ ಅಂತ ಈ ಮೈಸೂರವ ಇಲ್ಲಿ ಸತ್ಯಾಗ್ರಹ ಹೂಡಾನ್ರೀ!

ಎಂ. ಎಸ್ ನಲ್ಲಿ ನಾಲ್ಕನೇ !

(ನಮ್ಮ ಸ್ವಂತ ಬೇಟಿದಾರನಿಂದ)

ನಮ್ಮ ಸಂಪಾದಕರ ಕ್ರೂರ ಅಪ್ಪಣೆಯ ಮೇರೆಗೆ ನಾನು ಎಂ. ಎಸ್. ನಲ್ಲಿ ಈ ಸಾರಿ ನಾಲ್ಕನೇ ಬಾರಿಗೆ ನಪಾಸಾದ ಸಾಹಸಿ ವಿದ್ಯಾರ್ಥಿಯ ಭೇಟಿಮಾಡಲು ಅಡಿಕೆ ತೋಟದ ಬಳಿ ಇದ್ದ ಅವನ ಮನೆಗೆ ಬೆಳಿಗ್ಗೆ ೧೦ ಗಂಟೆ ಹೊತ್ತಿಗೆ ಹೋದೆ. ಆಗ ತಾನೇ ವಿದ್ಯಾರ್ಥಿಯು ಕೊಳಗದಲ್ಲಿ ಕಾಫಿ ಕುಡಿಯುತ್ತಿದ್ದ. ನನ್ನ ಮುಖ ವನ್ನು ನೋಡಿ 'ಇವನೇ ಇರಬೇಕು ಪತ್ರಿಕಾ ಭೇಟಿಗಾರ, ನನ್ನ ಭೇಟಿಗೆ ಕಾತುರ ನಾಗಿ ಬಂದಿದ್ದಾನೆ." ಎಂದು ತಿಳಿದುಕೊಂಡು ಹಸನ್ಮುಖಿಯಾದ. "ಕ್ಯಾಮರಾ ತರಲಿಲ್ಲವೇ? ಫೋಟೋ ತೆಗೆದುಕೊಳ್ಳಲಿಕ್ಕೆ" ಎಂದು ಕೇಳಿದ. ಆಗಲೇ ಅವನ ಚಾಣಾಕ್ಷ ಬುದ್ಧಿಯನ್ನು ಕಂಡು ಸುಸ್ತಾದೆ. ಇಷ್ಟು ಬುದ್ಧಿವಂತ ಪ್ರತಿಭಾಶಾಲಿ ಇವನು ಹೇಗೆ ನಾಲ್ಕು ಬಾರಿ, ಈ ಎಂ. ಎಸ್. ನಲ್ಲಿ, ಅಂದರೆ ಈ ಲೋಫರ್ ಸೆಕಂಡರೀಲಿ, ನಪಾಸಾದ. ಎಂದು ಆಶ್ಚರ್ಯಪಟ್ಟೆ.

'ಕ್ಯಾಮರಾ ಇಲ್ಲ' ಆದರೆ ಫೋಟೋ ಇದ್ದರೆ ಕೊಡಿ. ಭೇಟಿವರದಿ ಜತೆಗೆ ಹಾಕುತ್ತೇನೆ ಎಂದೆ.

ಓಹೋ! ಹೀಗಾಗಬಹುದು ಅಂತ ತಿಳಿದುಕೊಂಡೇ ನನ್ನ ಚೌಲದಲ್ಲಿ ತೆಗೆದ ಫೋಟೋ ಪ್ರತಿ ಮಡಗಿದ್ದೇನೆ. ಸ್ವಲ್ಪ ಮಿಾಶೆ ಬಳಿದರೆ ನನ್ನ ಈಗಿನ ರೂಪಿಗೆ ತದ್ವತ್ ಸಹಜವಾಗುತ್ತೆ. ಈಗ ನಿಮ್ಮ ಪ್ರಶ್ನೆಗಳನ್ನು ಕೇಳಿ ಎಂದ.

ಎಷ್ಟು ಧೈರ್ಯವಾಗಿದ್ದಾನೆ ಈ ಎಂ. ಎಸ್. ವಿದ್ಯಾರ್ಥಿ, ಎಂದೆನ್ನಿಸಿತು. ಸ್ವಲ್ಪವಾದರೂ ದೊಡ್ಡವರು ಅಂತ ಹೆದರುವುದೇ ಇಲ್ಲವಲ್ಲಾ! ಇಂತಹವರಿಂದಲೇ ಭಾರತದ ಭವಿಷ್ಯ ರಚಿತವಾಗಬೇಕು ಅಂದ ಮೇಲೆ ಭವಿಷ್ಯ ಭದ್ರ ಎಂದೂ ಧೈರ್ಯ ಬಂತು — ನನಗೆ—

ಮೊದಲನೆಯ ಸಾರಿ ನಪಾಸಾಗಲು ಕಾರಣವೇನು?

ಆ ಸಾರಿ ಎದುರು ಕೂತಿದ್ದವನ ಉತ್ತರಗಳನ್ನೇ ನಾನು ಬರೆದೆ. ಆದರೆ ಅವನಿಗೆ ರ್‍ಯಾಂಕ್ ಬಂತು. ನನ್ನ ನಂಬರು ಉತ್ತೀರ್ಣ ಪಟ್ಟಿಯಲ್ಲಿ ಬರಲೇ ಇಲ್ಲ. ನನ್ನ ಬರಹ ಸ್ವಲ್ಪ ನೋಡಿ. ಮನಸ್ಸು ಓಡಿದಷ್ಟು ವೇಗವಾಗಿ ಬೆರಳು, ಲೇಖನಿ, ಓಡುವುದಿಲ್ಲ.

ಹಾಗಾಗಿ ಅಕ್ಷರಗಳು ಅರ್ಥವಾಗದೆ ನನಗೆ ನಪಾಸಾಗಿರಬಹುದು ಎಂದುಕೊಂಡೆ. ಮುಂದಿನ ವರ್ಷ ಬರವಣಿಗೆ ಸ್ಫುಟಗೊಳಿಸುವುದರಲ್ಲೇ ತಲ್ಲೀನನಾದೆ. ಈಗ ನಾನು ಬರೆದರೆ ಮುತ್ತು" ಎಂದು ಹೇಳಿದ.

"ಎಲ್ಲಿ ನಿನ್ನ ಹೆಸರು ವಿಳಾಸ ಬರಿ" ಎಂದೆ.

ಬರೆದು ಕೊಟ್ಟ ಕಾಗದದ ಮೇಲೆ. ಕೋತೀಗೆ ಕೋತಿ ಮುತ್ತು ಕೊಟ್ಟ ಹಾಗೇ ಇತ್ತು ಅವನ ಮುತ್ತಿನ ಅಕ್ಷರ.

"ಎರಡನೆಯ ವರ್ಷ ಹೇಗೆ ನಪಾಸಾದೆ" ಎಂದೆ.

"ಎರಡನೆಯ ವರ್ಷ ಪರೀಕ್ಷೆ ಹೊತ್ತಿನಲ್ಲೇ ನನ್ನ ದಾಯಾದಿ ಮದುವೆ ಆಯಿತು. ರಾತ್ರಿಯೆಲ್ಲಾ ಇಸ್ಪೀಟ್ ಆಡಬೇಕಾಗಿ ಬಂತು. ಬೆಳಿಗ್ಗೆ ಮುಖ ತೊಳೆದುಕೊಂಡು ಪರೀಕ್ಷೆಗೆ ಊಟಮಾಡಿ ಹೋಗಿ ಒಂದು ಹಾಳೆ ಬರೆದೆ. ಝುಕಾಯಿಸಿಕೊಂಡು ನಿದ್ರೆ ಬಂತು ಮೇಜಿನ ಮೇಲೆ ಮೊಣಕೈ ಇಟ್ಟು ಅದಕ್ಕೆ ತಲೆಕೊಟ್ಟು ಒಂದು ಐದು ನಿಮಿಷ ಮಲಗ್ಗಿ ಎಚ್ಚೆತ್ತು ತಿಳಿ ಬುದ್ಧಿಯಿಂದ ಬರೆಯೋಣ ಎಂದು ತೂಕಡಿಸಿದೆ. ಎಚ್ಚರವಾದಾಗ ಗಂಟೆ ಹೊಡೆಯುತ್ತಿತ್ತು. 'ಕೊಡು ನಿನ್ನ ಉತ್ತರದ ಪೇಪರ್‌ನ ಅಂತ' ಪರೀಕ್ಷಾರಕ್ಷಕ ನನ್ನ ಒಂದು ಹಾಳೆ ಉತ್ತರವನ್ನೇ ಕಸಿದು ಕೊಂಡು ಹೋದರು. ನಮ್ಮೂರಿನಲ್ಲಿ ಮದುವೆ ಏಳು ದಿನ ಸಾಂಗವಾಗಿ ಮಾಡ್ತಾರೆ. ಆದರೆ ಪರೀಕ್ಷೆ ಐದು ದಿನ ನಡೆಯಿತು. ಮದುವೆ ಆದ ಮೇಲೆ ಪರೀಕ್ಷೆ ಬಂದಿದ್ದರೆ ರ್‍ಯಾಂಕ್ ಗಿಟ್ಟಿಸಬಿಡುತ್ತಿದ್ದೆ. ಅಷ್ಟು ಚೆನ್ನಾಗಿ ಓದಿದ್ದೆ ಅಷ್ಟು ಚೆನ್ನಾಗಿ ಬರವಣಿಗೆ ಸ್ಫುಟಗೊಳಿಸಿದ್ದೆ." ಎಂದ.

"ಮೂರನೆಯ ಸಾರಿ ನಪಾಸಾದ ಬಗೆ" ಎಂದೆ.

'ಅದು ದೇವರ ಕೆಲಸ. ಮಾಯೆ ಅಂತಾರಲ್ಲ ಅದು ಆವರಿಸಿಕೊಂಡುಬಿಟ್ತು. ನನ್ನೆದುರು ಬೆಂಚಿನಲ್ಲಿ ಒಬ್ಬ ಚೋಟಿ ಪಿಲ್ಟು ಬಲು ಶಹಣೆ ಹುಡುಗ. ಅವನು ಬರೆದಿದ್ದನ್ನು ನಾನು ಬರೆದರೆ ಖಂಡಿತ ರ್‍ಯಾಂಕು ಅಂತ ಧೈರ್ಯ ಬಂದಿತ್ತು. ಪ್ರಶ್ನಪತ್ರಿಕೆ ಕೊಟ್ಟ ಹತ್ತು ನಿಮಿಷದಲ್ಲಿ ಅವನು ಒಂದು ಪ್ರಶ್ನೆಗೆ ಉತ್ತರ ಮುಗಿಸುತ್ತಿದ್ದ. ಅವನ ಕೈ ಓಡಿಸಿದಂತೆಯೇ ನಾನೂ ಓಡಿಸಿ, ಅವನಂತೆಯೇ ನಾನೂ ಒಂದು ಗಂಟೆಯಲ್ಲಿ ಉತ್ತರ ಪತ್ರಿಕೆ ಮುಗಿಸಿ ಅವನಾದ ಮೇಲೆ ನಾನೂ ಅದನ್ನು ಒಪ್ಪಿಸಿ ಹೊರಕ್ಕೆಬಂದೆ. ಪರೀಕ್ಷೆಯ ಐದು ದಿನಗಳೂ ಹಾಗೆಯೇಮಾಡಿದೆ.

"ಮತ್ತೆ ಏಕೆ ಪಾಸಾಗಲಿಲ್ಲ"

"ಅವನ ರಿಸಲ್ಟ್ ಬರಲೇ ಇಲ್ಲ" ನಾನು Absent ಅಂದರು.

" ಅರೆ! ಅವ ಶಹಣೆ ಹುಡುಗ ಅಂದೆ "

" ಹೌದು! ಅವ ಶಹಣೆ ಅಂತಲೇ ಅವರಪ್ಪ. ಡೈರೆಕ್ಟರಿಗೆ ಪತ್ರ ಬರೆದರು. ಒಂದೇ ನಂಬರ್ ಬರೆದಿರೋದು ಒಂದೇ ತರಹಾ ಬರದಿರೋದು ಎರಡು ಉತ್ತರ ಪತ್ರಿಕೆಗಳು ಬಂದಿದೆ. ಅಂದ ಮೇಲೆ ಒಬ್ಬರದೊಬ್ಬರು 'ಕಾಪಿ' ಮಾಡಿದ್ದಿರಬೇಕು ಎಂದು ಇಬ್ಬರನ್ನೂ ನಪಾಸ್ ಮಾಡಿಸಿದೆ ಅಂತ ಅವರು ಬರೆದರು "

" ಅದು ಹೇಗಯ್ಯಾ! ಸಾಧ್ಯ! "

" ಅಯ್ಯೋ! ಹೇಳೋದು ಮರೆತೆ. ಅದಕ್ಕೇ ಮಾಯೆ ಅಂದಿದ್ದು ದೇವರ ಕೈವಾಡ ಎಂದಿದ್ದು. ಪತ್ರಿಕೆಯ ಮೇಲೆ ಅವನು ಅವನ ನಂಬರು ಬರೆದ. ಅದನ್ನೇ ನಾನೂ ಬರೆದೆ ನನ್ನ ಪತ್ರಿಕೆಯ ಮೇಲೆ. "

" ಕಡೆಗೇನಾಯಿತು ಆ ಹುಡುಗನಿಗೆ? "

'ಅವರಪ್ಪ ಬಿಡಲಿಲ್ಲ. ಕಡೇತನಕ ಕಾದಾಡಿ ಹೀಗೀಗಾಗಿರಬಹುದು ಎಂದರು. ಕಡೆಗೆ ಅಧಿಕಾರಿಗಳು ಒಪ್ಪಿ ಅವನ ರಿಸಲ್ಟ್ ಹೊರಗೆಡವಿದರು. ಎರಡನೇ ರ್‍ಯಾಂಕು ಬಂದಿತ್ತು ಆ ಹುಡುಗನಿಗೆ.

" ದಿಟ ದಿಟ ಇದು ದೇವರ ಮಾಯೇನೇ ಸರಿ! ಆದರೆ ನಾಲ್ಕನೇ ವರ್ಷ ಈ ಸಾರಿ ನಪಾಸಾಗಲು ಕಾರಣ ?"

" ಅದು ನಮ್ಮಪ್ಪನ ತಪ್ಪು ಅವರು ಬರುತ್ತಿದ್ದಾರೆ ತೋಟದಿಂದ ಅವರನ್ನು ಕೇಳಿ" ಎಂದು ತೋಟದಿಂದ ಆ ಹೊತ್ತಿಗೆ ಬಂದ ತಂದೆಯವರಿಗೆ ನನ್ನನ್ನು ಭೇಟಿ ಮಾಡಿಸಿದ.

ಟವಲನ್ನೇ ಕೋರೆ ರುಮಾಲಿನ ಹಾಗೆ ತಲೆಗೆ ಕಟ್ಟಿದ್ದರು ಅವರು. ಧೃಡ ಕಾಯ. ಆದ್ದರಿಂದಲೇ ಆ ಧೃಡವಾದ ಮಿಶೆಯನ್ನು ಆತ ಹೊರಲು ಸಾಧ್ಯ ಎನ್ನಿಸಿತು. ಇಲಿಯನ್ನು ಹುಲಿ ನೋಡುವಂತೆ ನನ್ನನ್ನು ನೋಡಿ,

" ನೀವೇನೂ ಮಾಸ್ತರಲ್ಲ ತಾನೇ" ಎಂದು ಗುಟರಿದ.

" ಇಲ್ಲಪ್ಪಾ! ಇಲ್ಲಾ! ಅದಕ್ಕೂ ಹೀನವಾದ ಪತ್ರಿಕೋದ್ಯಮಿ. ಕಂಡವರ ಭೇಟಿ ಪಡೆದು ಅದನ್ನು ಪ್ರಕಟಿಸಿ ಹೊಟ್ಟೆ ಹೊರೆದುಕೊಳ್ಳುವ ಜೀವಿ" ಎಂದೆ.

" ಕೋಪಿಸಿಕೊಂಡೆ ಎಂದು ತಿಳಿದುಕೋಬೇಡಿ. ಇವನ ಮಾಸ್ತರು ನನ್ನನ್ನು ಕಂಡಾಗಲೆಲ್ಲ ನಿಮ್ಮ ಹುಡುಗ ಓದುವುದಿಲ್ಲ. ಪರೀಕ್ಷೆಗೇ ಕೂಡುವುದಿಲ್ಲ. ಜಾಣ. ಸುಮ್ಮಗೆ ಕೂತರೆ ಪ್ಯಾಸಾಗುತ್ತೆ. ಶಾಲೆಗೆ ಒಳ್ಳೇ ಹೆಸರು ಬರುತ್ತೆ ಎಂದು ಹೊಡೆದು ಕೊಳ್ಳುತ್ತಾರೆ.

ಈ ಸಾರಿ ನೋಡಿ ಪರೀಕ್ಷೆ ಹೊತ್ತಿಗೆ ನಮ್ಮ ದೊಡ್ಡಪ್ಪ ಮನೆಗೆ ಬಂದಿದ್ದರ ಅವರಿಗೆ ಮಕ್ಕಳಿಲ್ಲದೆ ಹೆಂಡತಿ ಕಡೆ ಯಾವುದೋ ಒಂದು ಮಗುವನ್ನು ದತ್ತು ತೆಗೆದು ಕೊಂಡಿದ್ದಾರೆ. ಅಂದರೆ ನಮಗೆ ಬರಬೇಕಾದ ಆಸ್ತಿ ಅನ್ಯಾಯವಾಗಿ ಹೋಯ ಲ್ಲವೇ? ಹೇಗಾದರೂ ಮಾಡಿ ಅದನ್ನು ಗಿಟ್ಟಿಸಬೇಕು ಎಂದು ಹೊಂಚುತ್ತಿದ್ದೆ.... ಮಹರಾಯಾ ನಾಲ್ಕು ದಿನ ಇದ್ದು ಹೋಗೋಣ ಹೆಂಡತಿ ಕಾಟ ತಪ್ಪಿಸಿಕೊಂಡು ಅಂತ ಇಲ್ಲಿಗೆ ಬಂದ. ಆವನಿಗೆ ಇಸ್ಪೀಟು ಎಂದರೆ ಪ್ರಾಣ. ನಾನೂ, ನನ್ನ ತಮ್ಮ, ದೊಡ್ಡಪ್ಪ ಮೂವರಾದೆವು. ನಾಲ್ಕನೆಯ ಆಟಗಾರನಿಲ್ಲದೆ ಮಗನನ್ನೇ ಕೂತುಕೋ ಅಂದೆ.

"ಪರೀಕ್ಷೆ ಅಂದ. ಅದರ ಮುಂಡವೋಚಿತು. ಈ ಆಟದಲ್ಲಿ ಗೆದ್ದರೆ ದುರ್ಯೋಧನನ ಹಾಗೆ ಇರಬಹುದು ನಾವು. ಆಟಕ್ಕೆ ಒಂದು ಅಡಿಕೆ ಮರ, ಬೇಸ್ತಿಗೆ ಒಂದು ತೆಂಗಿನ ತೋಟ ಎಂದು ಆಡುತ್ತಿದ್ದೇವೆ. ದೊಡ್ಡಪ್ಪನ ಹತ್ತಿರ ಸಾವಿರ ಅಡಿಕೆ ಮರ ಇದೆ. ಎರಡು ತೆಂಗಿನ ತೋಟ ಇದೆ. ನಿನಗೆ ಈ ಆಟದಲ್ಲಿ ದೇವರು ಬುದ್ಧಿ ಕೊಟ್ಟಿದ್ದಾನೆ 'ಪರೀಕ್ಷೆ ಹಾಳಾಗಿ ಹೋಗಲಿ, ನೀನು ಮನೇಲಿ ಆಡ್ತಾ ಇರು ಎಂದೆ.

ನಾಲ್ಕು ದಿನ ದೊಡ್ಡಪ್ಪ ಆಡಿದ. ಎದುರಿಗೆ ಕಾಣುತ್ತೆ ನೋಡಿ ಆ ಗುಡ್ಡದ ತಪ್ಪಲಲ್ಲಿ, ಆ ಅಡಿಕೆ ತೋಟ ಈಗ ನಮ್ಮದು. ಅಲ್ಲಿ ನೋಡಿ, ಆ ಪಶ್ಚಿಮದಲ್ಲಿ ಹೊಳೆ ಪಕ್ಕದಲ್ಲಿದೆಯಲ್ಲಾ ಆ ತೆಂಗಿನ ತೋಪು ಈಗ ನಮ್ಮದು. ಇರೋನೊಬ್ಬ ಮಗ. ಇಷ್ಟು ಸಂಪಾದನೆ ಮಾಡಿದ್ದಾನೆ ನಾಲ್ಕುದಿನದಲ್ಲಿ ಅದನ್ನ ಬಿಟ್ಟು ಪರೀಕ್ಷೆ ಅಂತೆ ಇವನ ತಲೆ—" ಎಂದ.

ನನಗೆ ತಲೆಯೆಲ್ಲಾ ಘಂ ಘಂ ಎನ್ನಿಸುತ್ತಿತ್ತು ವಾಹವ್ವಾ! ಮಲನಾಡ ದುರ್ಯೋಧನ. ಎಂದಂದುಕೊಂಡೆ.

"ಆದರೆ ಆ ದತ್ತು ಮಗುವಿಗೆ" ಎಂದೆ.

"ಅದು ಬೆಳೆದ ಮೇಲೆ ದೊಡ್ಡಪ್ಪನ ತಿಥಿ ಮಾಡುತ್ತೆ. ಆ ಕಷ್ಟವೂ ನಮ್ಮ ಹುಡುಗನಿಗೆ ತಪ್ಪಿತು" ಎಂದ. ಆತ.

ಕನಸಿನಲ್ಲಿದ್ದವನಂತೆ ಹಿಂತಿರುಗಿದೆ. ಈ ವರದಿಯನ್ನು ಯಥಾವತ್ತಾಗಿ ಬರೆದು ಕಳಿಸಿದ್ದೇನೆ. ಈ ಪ್ರಭಾವಶಾಲಿ ವಿದ್ಯಾರ್ಥಿಯನ್ನು ನಮ್ಮ ಘನ ಸರ್ಕಾರವು ಉಪಯೋಗಿಸಿಕೊಂಡು ಉತ್ತೇಜನ ಕೊಟ್ಟರೆ, ಮುಂದಕ್ಕೆ ಅಂತರ್ರಾಷ್ಟ್ರೀಯ ಸಂಸ್ಥೆಗಳಿಗೆ ಹೋಗಿ ದೇಶ ದೇಶದ ಪ್ರತಿನಿಧಿಗಳೊಡನೆ ಇಸ್ಪೀಟಾಡಿ, ನಮ್ಮ ದೇಶದ ಭಾಗ್ಯವನ್ನು ಖಂಡಿತ ಹೆಚ್ಚು ಮಾಡುತ್ತಾನೆ ಎನ್ನುವುದರಲ್ಲಿ ಸಂದೇಹವೇ ಇಲ್ಲ.

—ಪ್ರಕಾಶ್.

ಯಾತ್ರಿಕರ ಪತ್ರ
(೨)

ಮೈಸೂರು ಬಿಟ್ಟೆವು. ರಾಜ ಚಂದೀ ಇಬ್ಬರೂ ಶುರುವಲ್ಲಿಯೇ ಬಿರುಸಾಗಿ ಸೈಕಲ್ ತುಳಿದು—ನಾನವರನ್ನ ಸೇರೊಹೊತ್ತಿಗೆ ಮುಖ್ಖಾಲು ಘಂಟೆಯಾಯ್ತು. ಇಬ್ಬರೂ ಒಂದು ಆಲದ ಮರದ ಕೆಳಗೆ ಸುಸ್ತಾಗಿ ಮಲಗಿದ್ದರು. ಚಂದಿ ನನ್ನೋಡಿ ಎದ್ದು—

"ಅಯ್ಯಾ ನಿನ್ನಕಟ್ಕೊಂಡು ನಾವು ಯಾತ್ರೇನ ಪೂರೈಸಿದ ಹಾಗೇ ಇದೆ. ಏನು, ನಡಕೊಂಡು ಬಂದ್ಯಾ ಇಲ್ಲ ಉರುಳು ಸೇವೆ ಮಾಡ್ಕೊಂಡು ಬಂದ್ಯಾ?" ಅಂತ ಹಾಸ್ಯಮಾಡಿದ.

ಅದಕ್ಕೆ ನಾನು "ಲೋ ಈಗಲೇ ಸುಸ್ತು ಮಾಡ್ಕೋ ಬಾರ್ದೋ. ಓದಿಲ್ವೇನೋ—ಆಮೆ ಮೊಲದ ಕಥೇನ? ನಾನು ಆಮೆ ಹಾಗೆ—Slow & Steady ಕಣೋ" ಅಂದೆ.

ಚಂದಿ "ಸುಮ್ನಿರೊಲೋ ಅಡ್ಗೂಲಜ್ಜಿ., ತ್ರಾಣ ಇಲ್ದೆ ಕಟ್ಕೆ ಕಥೆ ಹೇಳ ಬೇಡ" ಅಂತ ಹೀಯ್ಯಾಳಿಸಿದ.

ರಾಜ ಎದ್ದ. "ಓಹೋ ಬಂದ್ನೇನಯ್ಯಾ? ನೀನೆಲ್ಲೋ ಹಿಂತಿರುಗಿ ವಾಪ ಸಾದೆ ಅಂದ್ಕೊಂಡಿದ್ದೆ. ಏನು ಸುಸ್ತೇನೋ ಆಗಲೇ?" ಅಂತ ಕೇಳಿದ.

ಅಷ್ಟರಲ್ಲಿ ಚಂದಿ "ಲ್ರೋ ನೋಡಿದಿರೇನ್ರೋ ಆ ಟೆನ್‌ಸಿಂಗ್‌ನ? ಅವನು ನಮ್ಮೆವರೆಸ್ಟ್ ಹತ್ತಿದ್ದಕ್ಕೆ ಎಲ್ಲೂ ಇಲ್ದ ಮರ್ಯಾದೆ! ರಾಣೀನೂ ಕಳಿಸೋದೇ, ನಂಪ್ರಸಾದೂ ಕಳ್ಸೋದೇ—ಕಡೇಗೆ ನಮ್ಮನೇಲಿ ನಾಣಿ ಮೊನ್ನೆ ಪೇಪರ್‍ರ್ರೋತ್ತಾ "ನೋಡ್ದೇನಣ್ಣಾ, ಕಡೇಗೂ ನಮ್ದೇಶ್ದೋನೇ ಹತ್ಬಿಟ್ಟಾಹಿಮಾಲಿಯಾನ?" ಅಂತ ನನ್ನ ತಿರಸ್ಕಾರವಾಗಿನೋಡಿದ. ಸಾಲದ್ದಕ್ಕೆ ಟೆನ್ಸಿಂಗೆ ಪೆನ್ಷನ್ ಬೇರೇ ಕೊಡ್ತಾ ರಂತೆ ಇನ್ಮೇಲೆ—ಒಳ್ಳೇ ಖುಷೀಜಾಬ್ ಕಣ್ರೋ "ಅಂತ ಹರಟಿದ. ಅದಕ್ಕೆ ನಾನಂದೆ" ಹೌದೋ, ಇದುವರಿಗೂ ಯಾವನೂ ಪ್ರಪಂಚದಲ್ಲಿ ಪ್ರಪಂಚ ಹುಟ್ದಾ ಗ್ಲಿಂದ ಗೆದ್ದಿಲ್ದ ಹಿಮಾಲಯಾನ ಈ ಭೂಪತಿ ಗೆದ್ದಿದ್ದಕ್ಕೆ ಅಷ್ಟೂ ಬೇಡ್ವೇನೋ ಸಂಭಾವನೇ?"

ಆಗ ರಾಜಾ ನನಗೆ "ಲೋ ಗುಲ್ಡು ಬಾಯಿಮುಚ್ಕೊ. ನಮ್ಮ ನಾರದ, ವಸಿಷ್ಠ, ವಿಶ್ವಾಮಿತ್ರ, ವಾಲ್ಮೀಕಿ, ಕೌಂಡಿನ್ಯ ಇವರೆಲ್ಲ ಬೆಳಿಗ್ಯೆ ಎವರೆಸ್ಟ್‌ನಲ್ಲಿ ಪ್ರಾತಃ ಕರ್ಮ ಮುಗಿಸಿ, ಮಧ್ಯಾಹ್ನಿಕಕ್ಕೆ ಕೈಲಾಸಕ್ಕೆ ಬಂದು, ಊಟಕ್ಕೆ ಅಯೋಧ್ಯೆಗೆ ಇಳಿದು ಪುನಹ ಸಾಯಂಕಾಲದ ಸಂಧ್ಯಾವಂದನೇಗೆ ಶಿಖರಕ್ಕೆ ವಾಪಸ್ ಹೋಗ್ತಾ ಇದ್ದರಂತೋ! ಈಗ಼್ೂ ಅಶ್ವತ್ಥಾಮ ವ್ಯಾಸ ಅಲ್ಲೇ ಎಲ್ಲೋ ಓಡಾಡ್ತಾ ಇದಾರಂತೊ. ಅಂಥಾದ್ರಲ್ಲಿ ಈ ಟೆನ್ಸಿಂಗ್ ಹತ್ತಿದ್ದು ಏನು ಮಹಾ? ಅದೂ ಮೂರನೇ ಸಾರಿ- ನಾನು E P.S. ತಕೊಂಡ ಹಾಗೆ" ಅಂದ.

ಚಂದಿ, "ಹೌದೋ. ಇವತ್ತೆಲ್ಲಾ ಎವರೆಸ್ಟ್ ಒಂದಾರು ಮೈಲಿ ಇದ್ದೀತೇನ್ರೋ? ನಂಬೆಂಗ್ಳೂರ್ನಲ್ಲಿ ಮಲ್ಲೇಶ್ವರದಿಂದ ಬಸವನಗುಡೀವರೆಗೆ ಇದ್ದಷ್ಟು ದೂರ! ಹಾಗೇನೇ ಅದ್ಯಾವೊನೋ ಸಮುದ್ರದಲ್ಲಿ ಒಂದು ಮೈಲಿ ದೂರ ಕೆಳಗಿಳಿದನಂತೋ— ಅದೂ ಒಂದು ಪಂಜರದಲ್ಲವಿತುಕೊಂಡು. ಅವನಿಗೆಲ್ಲೂ ಇಲ್ಲ ವಾಲಗ! ನಾನು ನಿತ್ಯ ನಮ್ಮನೆಯಿಂದ ಫ್ಯಾಕ್ಟರೀಗೆ—ದಿಸ್‌ಮಿಸ್ ಆಗೋಕೆ ಮೊದಲು—7½ ಮೈಲಿ ಬುಸುಗುಟ್ಕೊಂಡು ಸೈಕಲ್ ತುಳಿದರೂನೂ, ಒಂದೈದು ನಿಮಿಷ ಲೇಟಾದ್ರೆ ಫ್ಯಾಕ್ಟರೀ ಗೇಟೇ ಬಂದು. ಅವತ್ತಿನ ಕೂಲಿ ಖೋತಾ. ಅನ್ಯಾಯ ಕಣ್ರೋ— ಈ Vertical ಗೂ Horizontal ಗೂ ಇರೋ ವ್ಯತ್ಯಾಸ" ಅಂತ ಶಪಿಸಿದ.

ಈ ನನ್ನ ಸ್ನೇಹಿತರ ಬುದ್ಧಿ ನೆಟ್ಟಗೆ ಮಾಡೋಕೆ ದಾರಿಯೇನೂ ತೋಚದ್ದ ರಿಂದ ನಾನು ಸುಮ್ಮನಿದ್ದೆ. ಅಷ್ಟರಲ್ಲಿ ಒಂದು ಎರಡೆತ್ತಿನ ಬಂಡಿ ಒಂದು ನಿಲ್ತು ನಮ್ಮ ಹತ್ತಿರ. ಬಂಡಿಯಲ್ಲಿ ಒಬ್ಬ ಗೌಡ, ಒಬ್ಬ ಹೆಂಗಸು - ಗೌಡನ ಹೆಂಡತಿ ಇರಬೇಕು—ಮತ್ತು ಒಬ್ಬ ಸೂಟೂ ಕ್ರಾಪಿನ ೨೦ ವಯಸ್ಸಿನ ಹುಡುಗ ಇದ್ದರು. ಗೌಡ ಹುಡುಗ ಇಬ್ಬರು ಗಾಡಿಯಿಂದ ಇಳಿದರು. ಗೌಡ ನಮ್ಮ ಹತ್ತಿರ ಬಂದು.

"ನಿಮ್‌ದ್ಯಾವ್ದೇಸ ಸ್ವಾಮೀ" ಅಂತ ಕೇಳಿದ. ಆ ಸೂಟಿನ ಹುಡುಗ ಮುಂದಕ್ಕೆ ಬಂದು "ಸುಮ್ನಿರವ್ವಾ ನೀನು." ಅಂತ ಗೌಡನ ಕಡೆ ಹುಬ್ಬೆಗುರಿಸಿ, ನಮ್ಮ ಕಡೆ ತಿರುಗಿ "Where are you coming Saar ?" ಅಂತ ಕೇಳಿದ. ಗೌಡನ ಮುಖದಲ್ಲಿ ಜಂಭ ಉಕ್ಕಿತು. "ಸ್ವಾಮಿ—ಇವ ನನ್ಮಗ ಬುದ್ಧಿ. ಮೈಸೂರ್ನಿಂದ ರಜಕ್ಕೆ ಬಂದವ್ನೆ. ಇಂಗ್ಲೀಸ್ ಕಳಾಸ್ ಓತ್ತಾನೆ" ಅಂತ ತನ್ನ ತಂಬ್ಯಾಕು ಹಲ್ಲೆಲ್ಲಾ ಕಿರಿದ. "ನೀವು ಯಾವೂರು ಬುದ್ಧಿ" ಅಂತ ಕೇಳಿದ.

"ಅದೇಪ್ಪ ನಾನೂ ಕೇಳಿದ್ದು ಅವರ್ನ" ಅಂತ ಮಗ ಗೌಡನ್ನ ಗದರಿಸಿ, ಮತ್ತೆ ನಮ್ಮ ಕಡೆತಿರುಗಿ.

"ವೇರಾರ್ಯೂ ಕಮಿಂಗ್ಸಾರ್" ಅಂದ.

"ನಾವು ಬೆಂಗ್ಳೂರು. ಹೀಗೇ ಹಳ್ಳಿಗಳನ್ನ ಸುತ್ಕೊಂಡು ಹೊರಟಿದ್ದೀವೆ"ಅಂದೆ.

"ತಲಕಾಡಿಗೆ" ಅಂತ ಸೇರಿಸಿದ ರಾಜ.

"ಅಂಗಾರೆ ಬನ್ನಿ ಬುದ್ದಿ. ಈ ಗಾಡ್ಯಾಗೆ ನಿಮ್ಮ ಬೈಸೊಕಲ್ಗೊಳ್ನೆಲ್ಲಾ ಹಾಕಿ ಕುಂತ್ಕೊಳ್ಳಿ. ಒಂದತ್ತು ಮೈಲಿ ನಮ್ಮಳ್ಳೀಗೋಗಾನ. 'ಅಲ್ಲಿ ವಶೀ ಸುದಾರಿಸ್ಕೊಳ್ಳಿ" ಅಂತಾ ನಮಗೆ ಕೇಳಿ ಆ ಗೌಡ ಗಾಡೀ ಕಡೆಗೆ ತಿರುಗಿ "ಲೇ ಬೈರೀ, ವಶೀ ಮುದರ್ಕೊಳ್ಳೀ. ಈ ಸ್ವಾಮ್ಗೋಳ್ನೆಲ್ಲಾ ನಮ್ಮ ನಮ್ಮಳ್ಳೀಕ್ಕರ್ಕೊಂಡ್ಹೋಗಾನಾ" ಅಂತ ತನ್ನ ಹೆಂಡತೀಗೆ ಆಜ್ಞಾಪಿಸಿದ.

ನಾನು ಆಗಲಿ ಅಥವಾ ಬೇಡ ಅಂತ ಹೇಳೋದರೊಳಗಾಗಿ ರಾಜಾ ಚಂದಿ ಆ ಇಂಗ್ಲೀಸ್ ಕಳಾಸ್ ಹುಡುಗನ ಸಹಾಯದಿಂದ ನಮ್ಮ ಸೈಕಲ್‌ಗಳನ್ನ ಗಾಡೀಗೆ ಎತ್ತಿ ತಾವೂ ಹತ್ತಿ ನಿಂತರು—ಟಿಕೆಟ್ ತಕೊಂಡು B.T.C.ಲಿ Standing Seat ನಲ್ಲಿ ನಿಂತ್ಹಾಗೆ. ನನಗೆ ಏನೋ ಹೇಳೋಕೆ ಬಾಯಿಗೆ ಬಂತು. ನಾಲಿಗೆ ಸರಿಮಾಡಿಕೊಳ್ಳೋದರೊಳಗಾಗಿ ರಾಜಾ ಕೈಚಾಚಿದ. ಚಾಚಿದ ಕೈಹಿಡಿದು ಗಾಡೀಗೆ ನಾನೂ ಹತ್ತಿದೆ.

ಗಾಡಿ ಮುಂದಕ್ಕೆ ಸಾಗಿತು.

ಗೌಡ ಶುರು ಮಾಡಿದ—"ಬುದ್ದೀ, ಅದೇನ್ಬುದ್ದೀ ಅದು? ನನ್ಮಗ ಹೇಳ್ತಾನೆ ಏನೇನೊ. ಇನ್ನೈದು ವರ್ಷದಾಗೆ ಹಿಂಗಾಗ್ತದೆ ಹಂಗಾಗ್ತದೆ, ನಾವ್ಹಿಂಗ್ಮಾಡ್ಬೇಕು ಹಂಗ್ಮಾಡ್ಬೇಕು. ಅಂತ ನಾವು ಅನ್ನೆಡ್ಡು ತಲೆಯಿಂದ ಬಂದ ಕಸುಬನ್ನ ಇನ್ನೆಂಗ್ಬುದ್ದೀ ಮಾಡ್ಬೇಕು?

"ಐಲರ್ಸ್ನ ದೆಂದಿ ಪ್ರೈವಿಯರ್ ಪ್ಲ್ಯಾನ್ಸಾಳ್" ಅಂದ ಹುಡುಗ.

ಆ ಇಂಗ್ಲೀಸ್ ಕಳಾಸ್ ಬೃಹಸ್ಪತೀಗೆ ಕನ್ನಡ ಸುತರಾಂ ಮರೆತು ಹೋಗಿದ್ದಾಗಿತ್ತು.

"ವಾಟ್ಡಿಡ್ಯೂಲರ್ಸ್ನ?" ಅಂತ ತಕ್ಷಣ ಚಂದಿ ಆ ಹುಡುಗನ್ನೇ ಕೇಳಿದ. ಚಂದಿ ತನ್ನ ಜನ್ಮದಲ್ಲೆಲ್ಲಾ ಸಾರ್ಥಕವಾಗಿ ನಾಲ್ಕೂವರೆ ಅಕ್ಷರದಲ್ಲಿ ಮಾತಾಡಿದ್ದು ಈಗ! ಇಂಗ್ಲೀಸ್ ಕಳಾಸ್ ಹುಡುಗ ಪುನಃ ಮಾತಾಡಲಿಲ್ಲ.

ರಾಜ ಶುರುಮಾಡಿದ. "ನೋಡಿ ಗೌಡ್ರೆ. ನಿಮ್ಮ ಹುಡುಗ ಹೇಳಿದ್ದು ಸರಿ. ನಮ್ಮ ಸರ್ಕಾರದವರು ಬಹಳ ವಿಚಾರಣೆಮಾಡಿ ಕೆಲವು ನಿರ್ಧಾರಕ್ಕೆ ಬಂದಿದ್ದಾರೆ. ನೋಡಿ–ನಮ್ಮ ದೇಶದಲ್ಲಿ ಭೂಮಿ ಕಮ್ಮಿ ಇಲ್ಲ. ಜನ ಕಮ್ಮಿ ಇಲ್ಲ. ಆದ್ರೂ ನಮಗೆ ದರಿದ್ರ. ಕಣಜದಲ್ಲಿ ಭತ್ತ ಇಟ್ಕೊಂಡು ಅಕ್ಕೀಗೆ ತಿರುಪಕ್ಕೆ ಹೋಗ್ತೀವಿ. ಅದು ಯಾಕೆ? ನಮ್ಮ ಭೂಮೀಲಿರೋ ಸಂಪತ್ತನ್ನ ನಾವು ಪಡಬೇಕಾದ ಶ್ರಮ ಪಟ್ಟು ಉಪಯೋಗಿಸಿಕೊಂಡರೆ ನಮಗ್ಯಾಕೆ ದರಿದ್ರ? ಅಂದರೆ ನಮ್ಮ ಭೂಮಿ ಬೆಲೆ, ನಮ್ಮ ಬಲ ನಮಗೇ ಗೊತ್ತಿಲ್ಲ. ಅದಕ್ಕಾಗೇನೇ ಜನಕ್ಕೆ ತರಪೇತುಮಾಡಿ ಭೂಮಿ

ಯಿಂದ ಅದಷ್ಟು ಹೆಚ್ಚು ಆಹಾರ ಪದಾರ್ಥ ಬೆಳೆಯೋ ಹಾಗೆ ಮಾಡ್ಬೇಕು, ಇದಲ್ಲದೆ ಇನ್ನೂ ಬೇರೆ ಬೇರೆ ವಿಧವಾಗಿ...."

ಅಷ್ಟರಲ್ಲಿ ಗೌಡ "ಅಂಗಾರೆ ಬುದ್ದೀ—ನಮ್ಮ ಪುರಾಣದಾಗೆ ಹೇಳ್ತಾರಲ್ಲಾ. ಪಾಂಡವರೂ ಕೌರವರೂ ಅವರ ಸೈನ್ಯ—ಅದೆಷ್ಟೇ ಬೈರೀ?—ಅದೆಷ್ಟೋ ಅಕ್ಷೋಇಣೀ ನಂತೆ—ಯವ್ವೈಯ್ಯ! ಅದ್ಹ್ಯಾಂಗ ಬುದ್ದೀ ಅಷ್ಟು ಜನಕ್ಕೆ ಊಟ, ತಿಂಡಿ, ಬಟ್ಟೆ ವದಗಿಸಿದ್ರು?" ಅಂತ ಕೇಳಿದ.

ನಮಗೆ I. A. S. ಪರೀಕ್ಷೆ!

ನಾನು ಹೇಳಿದೆ "ನೋಡಿ ಗೌಡ್ರೆ. ಪಾಂಡವರಿಗೆ ಕೌರವರಿಗೆ—ಏಕೆ—ಆ ಕಾಲದ ಜನಗಳಿಗೆ ಇದ್ದ ಬಲ ಅಂದ್ರೆ ದೈವಬಲ. ಆಗ ನೋಡಿ—ಪ್ರತಿಯೊಬ್ಬನೂ ತನ್ನ ಕಸುಬನ್ನ ಹಿಡಿದು ತನ್ನ ಜೀವಾನೆಲ್ಲಾ ಅದಕ್ಕೆ ಧಾರೆ ಎರಿಯೋನು. ಆ ಭಾರತದ ಯುದ್ಧದಲ್ಲಿ ಒಬ್ಬ ರೈತಾ ಕೂಡ ಕತ್ತಿಹಿಡಿದಿದ್ದನೋ ಇಲ್ವೋ-ಅವನಿಗೆ ತನ್ನ ಭೂಮಿ ನೇಗಿಲೇ ಪ್ರಪಂಚ. ಈಗ ನೋಡಿ-ಒಂದು ಹಳ್ಳೀಲಿ ನೂರು ಜನ ಕೆಲಸಕ್ಕೆ ಲಾಯಖ್ಖಾದ ಆಳುಗಳಿದ್ರೆ, ಅವರಲ್ಲಿ ಐವತ್ತು ಜನಕ್ಕೆ ಖಾಯಿಲೆ-ನೇಗಿಲು ಹಿಡಿದರೆ ಕೈನಡುಕ! ಮಿಕ್ಕ ಐವತ್ತು ಜನರಲ್ಲಿ ಇಪ್ಪತ್ತೈದು ಜನ ಮಿಷನ್ ಕೆಲಸಕ್ಕೆ ಪಟ್ಟಣಕ್ಕೆ ದಾಖಲು—ಸಿನಿಮಾ ಮಸಾಲೆದೋಸೆ ಬಿಡಲಾರ್ರು. ಹತ್ತು ಜನಕ್ಕೆ ಸರ್ಕಾರಿ ಕೆಲಸಬೇಕು—ಇಂಗ್ಲೀಸ್ ಓದಿ ಹಳ್ಳೀಗೆ ಬರೋಕೆ ಅವರಿಗೆ ಹೀನಾಯ. ಸರಿ—ಇನ್ನೈದು ಜನ ಎಂದಾದರೊಂದು ದಿನ ಮಂತ್ರಿಗಳಾಗ್ತೀವಿ ಅಂತ ಪಾರ್ಟೀಗಿಳೀತಾರೆ. ಇನ್ನು ಹಳ್ಳೀಲೆಷ್ಟು ಜನ ಉಳಿತಾರೆ? ಹತ್ತು ಜನ. ಇದರಲ್ಲಿ ಐದು ಜನ ಕೋರ್ಟು ಕಛೇರಿ ವ್ಯಾಜ್ಯದಲ್ಲಿ ಮುಳುಗಿರುತಾರೆ. ಮಿಕ್ಕ ಐದು ಜನಕ್ಕೆ ವ್ಯವಸಾಯದ ಗಂಧವೇ ಇಲ್ಲ. ಇವರು ಬೇರೇ ಉಪಾಯವಿಲ್ದೆ ಅರ್ಧ ಮನಸ್ಸಿನಿಂದ ನೇಗಿಲು ಹಿಡಿದಿರೋದು. ಅವರಿಂದ ನಮ್ಮ ಭೂಮಿ, ನಾವು ಉದ್ಧಾರವಾಗ್ಬೇಕು. ಹೇಗೆ?"

ಗೌಡ ಐದು ನಿಮಿಷ ಸುಮ್ಮನಿದ್ದ. ಆಮೇಲೆ ನಿಧಾನವಾಗಿ "ಹೌದೂ ಬುದ್ದೀ...." ಅಂದ. ಮತ್ತೆ ಯೋಚನೇಲಿ ಮುಳುಗಿದ.

ರಾಜ, ಚಂದಿ, ಬೈರೀ, ಇಂಗ್ಲೀಸ್ ಕಳಾಸ್ ಹುಡುಗ ಸುಖವಾಗಿ ಗೊರಕೆ ಹೊಡೆಯುತ್ತಿದ್ದರು.

ಗಾಡಿ ಮುಂದಕ್ಕೆ ಸಾಗಿತು.

—"ಕೇಫ"

ಖಂಡಿತ ಒಪ್ಪಲ್ಲ

ರಂಗಜ್ಜಿ ಖಂಡಿತ ಒಪ್ಪೋದಿಲ್ಲ ನಾನು ಮಾಡಿದ್ದನ್ನ—ಅವಳಿಗೆ ತಿಳಿಸಿದರೆ—ಆದರೆ ನಾನು ಇನ್ನೇನು ತಾನೇ ಮಾಡಬಹುದಾಗಿತ್ತು!

ಬೇಸಿಗೆರಜಾಕ್ಕೆ ಬಂದು ಹೋಗು ಎಂದು ರಂಗಜ್ಜಿ ಕಾಗದ ಬರೆಸಿದ್ದಳು. ನನಗೂ ಬೆಂಗಳೂರಿನಲ್ಲಿ ಲಾಯರ್ ಚಾಕರಿಮಾಡಿ ಕಕ್ಷಿಗಾರರು ಕೊಡಿಸಿದ ಉಡುಪಿ ಅನ್ನ ಹಗಲು ತಿಂದು ಬೇಜಾರಾಗಿತ್ತು. ಹೇಗೂ ರಂಗಜ್ಜೀನ ನೋಡಿದ ಹಾಗೂ ಆಗುತ್ತೆ. ಹಳ್ಳಿ ತುಪ್ಪ ತಿಂದ ಹಾಗೂ ಆಗುತ್ತೆ ಅಂತ ಕೊಂಡೆನಕಹಳ್ಳೀಗೆ ಹೋಗಿದ್ದೆ. ಮೂರು ದಿನ ಹಾಯಾಗಿ ತಿಂದು ನಾಲ್ಕನೇ ದಿನ ಬೆಲ್ಟು ಸಣ್ಣದಾಗಿದ್ದು ಕಂಡು, ಅಯ್ಯೋ! ದೇವರೇ? ಇನ್ನು ಹದಿನೈದು ದಿನ ಇಲ್ಲೇ ಇದ್ದರೆ, ಒಂಭತ್ತು ಮೊಳದ ಪಂಚೆ ಕೊಂಡುಕೊಳ್ಳಬೇಕಾಗುತ್ತೇನೋ ಎಂದು ಬೆದರಿದೆ.

ಶನಿವಾರ ಬೆಳಗ್ಗೆ, ನನ್ನ ಸೋದರಮಾವ, ರಂಗಜ್ಜಿಯ ಏಕಮಾತ್ರ ಪುತ್ರ, ಅಮಲ್ದಾರರು ತಾಲೂಕಿಗೆ ಜಮಾ ಬಂದೀಗೆ ಬಂದಿದ್ದಾರೆ ಎಂದು ಹೇಳಿ ನಾಡಿದ್ದು ಬರ್ತೀನಿ ಎಂದು ಭರವಸೆಕೊಟ್ಟು ಹೊರಟುಹೋದರು.

ಶನಿವಾರ ಸಾಯಂಕಾಲ ಕೆರೆ ರಸ್ತೆಯಲ್ಲಿ ಅಡ್ಡಾಡಲು ಹೋದೆ, ಒಬ್ಬನೇ. ಕೆರೆ ಅಂಚಿನಲ್ಲಿ ಕಾಲುಗಂಟೆ ಕೂತಿದ್ದೆ. ತಿಳಿಯಾದ ಆಕಾಶ. ಹಸುಗಳೆಲ್ಲಾ ಹಳ್ಳಿಯ ಕಡೆಗೆ ಹೋಗುತ್ತಿದ್ದವು. ಗೋಪಾಲಕರೆಲ್ಲಾ ಪಿಳ್ಳಂಗೋವಿ ಊದುತ್ತಾ ನಡೆಯುತ್ತಿದ್ದರು. ನನ್ನ ಕಾಲಿನ ಹತ್ತಿರ ಫಳ ಫಳ ಅಂತ ಏನೋ ಹೊಳೆಯಿತು. ಏನು ಅಂತ ನೋಡಿದರೆ ಒಂದು ಸಾಮಾನ್ಯ ಬೆಣಚುಕಲ್ಲು. ಸುಮಾರು ಮೂರಂಗುಲ ಉದ್ದ, ಎರಡಂಗುಲ ದಪ್ಪ, ಒಂದಂಗುಲ ಅಗಲದ್ದು. ಎಷ್ಟು ನುಣುಪಾಗಿತ್ತು ಅಂತೀರಿ? ಎಷ್ಟು ಹೊಳಪಾಗಿತ್ತು ಅಂತೀರಿ? ಎಷ್ಟು ವರ್ಷಗಳಿಂದ ನೀರಿನಲ್ಲಿ ತೊಳೆಯಲ್ಪಟ್ಟು ಮರಳಿನಲ್ಲಿ ತೇಯಲ್ಪಟ್ಟು ಹಾಗಾಗಿತ್ತೋ ಕಾಣೆ ಆದರೆ ನೋಡಲು ಬಲು ಚೆನ್ನಾಗಿತ್ತು. ಇಳಿಯುವ ಸಂಧ್ಯಾ ಸೂರ್ಯನ ಬೆಳಕು ಯಾವುದೋ ಕ್ಷಣದಲ್ಲಿ ಅದನ್ನು ಹೊಳಪಿಸಿ ನನ್ನ ದೃಷ್ಟಿಗೆ ತಾಕಿಸಿತ್ತು. ಕೈಲಿ ತೆಗೆದುಕೊಂಡು ಅದರ ಮೃದುತ್ವವನ್ನೇ ಬೆರಳಿನಲ್ಲಿ ಕಾಣುತ್ತಾ, ಏನೇನೋ ಯೋಚನೆಮಾಡುತ್ತಾ, ಮನೆಗೆ ಹಿಂತಿರುಗಿದೆ. ಮನೆಗೆ ಬಂದ ಮೇಲೆ ಗೊತ್ತಾದುದು, ಆ ಕಲ್ಲನ್ನು ಇನ್ನೂ ಕೈಯಾಡಿಸುತ್ತಿದ್ದೇನೆ ಎನ್ನುವುದು.

ಆ ಕಲ್ಲನ್ನು ಕಿಟಕಿಯ ಮೇಲಿಟ್ಟೆ.

ಊಟ ಆಯಿತು. ಎಲೆಅಡಿಕೆ ಜಗಿಯುತ್ತಿದ್ದಾಗ ರಂಗಜ್ಜಿ ಹಿಂದಿನ ಕಾಲದ ನೆನಪುಗಳನ್ನೆಲ್ಲಾ ತೋಡಿಕೊಳ್ಳಲು ಶುರುಮಾಡಿದಳು. ನಮ್ಮಮ್ಮನಿಗೆ ರಂಗಜ್ಜಿ ಮಗ್ಗಿನಜಡೆ ಹಾಕಿ ಆರತಿಮಾಡಿದಾಗ ಸಾಕ್ಷಾತ್ ಅಮಲ್ದಾರರ ಎರಡನೇ ಹೆಂಡತೀನೆ ಆರತಿ ಹಾಡು ಹೇಳಿದ್ದು—ನನ್ನ ಚೌಲವನ್ನು ಶ್ರೀರಂಗಪಟ್ಟಣದಲ್ಲಿ ಮಾಡಿದಾಗ, ಮಾಡಿದ್ದ ಲಾಡುವನ್ನು ಕೋತಿಗಳಿಗೆ ಕೂಡ ಹಂಚಿದ್ದು, ನನಗೆ ಅಕ್ಷರಾಭ್ಯಾಸ ಮಾಡಿಸಿದಾಗ ಶ್ರೀ ಬರೆಸಲು ಪುರೋಹಿತರು ಉಂಗುರದ ಬೆರಳನ್ನೂ ಹಿಡಿದು ಪ್ರಯತ್ನಿಸಿದಾಗ ನಾನು A ಬರೆದಿದ್ದು—ಇತ್ಯಾದಿ ಇತ್ಯಾದಿ ಎಲ್ಲಾ ವಿಷಯಗಳನ್ನೂ ಹೇಳಿದಳು.

ಅಂದ ಹಾಗೇ ರಾಮು! ಹಾಳು ಪಟ್ಟಣ ಸೇರಿ ನೀನು ದೇವರ ಪೂಜೆ ಮಾಡೋದನ್ನೂ ಮರೆತುಬಿಟ್ಟಿದಿಯೇನೋ ಎಂದಳು. ಮುದುಕಿ ಮನಸ್ಸನ್ನು ಏಕೆ ನೋಯಿಸೋದು ಅಂತ ನಾನಂದೆ 'ಉಂಟೆ! ರಂಗಜ್ಜಿ. ಸಂಧ್ಯಾವಂದನೆಮಾಡಿ ದೇವರ ಪೂಜೆ ಮುಗಿಸೋತನಕ ಒಂದು ಉದ್ಧರಣೆ ನೀರೂ ಕುಡಿಯುಲ್ಲ ಎಂದೆ.

"ಅಶ್ವತ್ಥಾಮೋ ಹತಃ" ಎಂದಂತೆ. ಕಾಫಿ ಕುಡಿದರೆ ಅದನ್ನೂ ಹೇಳಿಕೊಳ್ಳಬೇಕೇ? ಅದೇನು ನೀರಲ್ಲವಲ್ಲ ಹಾಗೂ ಉದ್ಧರಣೆಯಲ್ಲಿ ಕುಡಿಯುಲ್ಲವಲ್ಲಾ ಎಂದು.

ಹಾಗಾದರೆ ರಾಮು! ನಾಳೆ ಭಾನುವಾರ. ಶಾಮಿ ತಾಲ್ಲೂಕಿಗೆ ಹೋಗಿದಾನೆ. ಬೆಳಿಗ್ಗೆ ನೀನೇ ಮಡಿಯಾಗಿ ದೇವರ ಪೂಜೆ ಮಾಡಿಬಿಡು. ನಮ್ಮನೆ ಸಾಳಿಗ್ರಾಮಕ್ಕೆ ತಲತಲಾಂತರದಿಂದ ನಿತ್ಯಾಭಿಷೇಕ ತಪ್ಪಿಲ್ಲ. ನಾಳೆ ಪಕ್ಕದ ಮನೆ ರಂಗಣ್ಣೋರಿಗೆ ಹೇಳೋಣ ಅಂತಿದ್ದೆ. ಆದರೆ ನೀನೆ ಇದೀಯಲ್ಲ. ನೀನೆ ಮಾಡಿಬಿಡು ಅಭಿಷೇಕಾನ ಎಂದಳು.

ನನಗೆ ಹಿಂದಿನಕಾಲದ ಪೂಜಾ ವಿಧಿ ಮರೆತಿತ್ತಿಲ್ಲ. ಬೆಂಗಳೂರು ಪೇಟೇಲಿ ನಮ್ಮನೆ ದೇವರನ್ನು ಅಡಿಗೆಮನೆ ಗೂಡಿನಲ್ಲಿ ಭದ್ರವಾಗಿರಿಸಿ ಬೀಗ ಹಾಕಿ, ಬೀಗದ ಕೈ ಕಳೆದುಕೊಂಡಿದ್ದರೂ ಕೂಡ ಬೈಸಿಕಲ್ ಮೇಲೆ ಕೋರ್ಟಿಗೆ ಹೋಗುವಾಗ, ಈ ಮಂತ್ರಗಳನ್ನೇ ಪಲುಕುತ್ತಾ ಹೋಗುವ ಅಭ್ಯಾಸ. ಈಗಿನ ಕಾಲದ ಹುಡುಗರು ವೈ ಅವಾರ ಹೂಂ—ಚಲಚಲ್ರೇ ಎಂದು ಪಲುಕುತ್ತಾ ಹೋಗುವಂತೆ. ನಾನು ಓಂ ತದಾತ್ಮಂ, ಓಂ ತತ್ಸತ್ಯಂ, ಓಂ ತತ್ಸವಿತುರ್ವರೇಣ್ಯಂ ಎಂದೆ ಬೈಸಿಕಲ್ ಪಾದಗಳನ್ನು ತುಳಿಯುತ್ತಿದ್ದೆ. ಅಂದ ಮೇಲೆ ಭಾನುವಾರ ಪೂಜೇಗೇನು ಕಡಿಮೆ. ಮಾಡಿಯೇಬಿಡುತ್ತೇನೆ ಎಂದು ರಂಗಜ್ಜಿಗೆ ಅಭಯ ಹೇಳಿದೆ.

ಭಾನುವಾರ ಬೆಳಿಗ್ಗೆ ಸ್ನಾನ ಮಾಡಿ, ಕಷ್ಟಪಟ್ಟು ಕಚ್ಚೆಪಂಚೆ ಉಟ್ಟು ದೇವರ ಮನೇಲಿ ಪೂಜೇಗೆ ಕುಳಿತೆ. ಗಟ್ಟಿಯಾಗಿ ಗಂಟೆ ಬಾರಿಸುತ್ತಾ, ಅದಕ್ಕೂ ಗಟ್ಟಿ

ಯಾಗಿ ಜ್ಞಾಪಕ ಇದ್ದ ಮಂತ್ರ ಹೇಳುತ್ತಾ, ಅಭಿಷೇಕಕ್ಕೆ ಶುರು ಮಾಡಬೇಕು ಸಂಪುಟದಿಂದ ಸಾಲಿಗ್ರಾಮ ತೆಗೆಯಬೇಕು—ತೆಗೆದೆ. ಅಭಿಷೇಕದ ತಟ್ಟೆಯಲ್ಲಿಟ್ಟೆ. ಆಗಲೇ ಕಾಣಿಸಿದ್ದು ಒಂದು ಕೆಂಜೇಳು. ಅಭಿಷೇಕದ ತಟ್ಟೆಯ ಪಕ್ಕದಲ್ಲೇ! ನನಗೆ ಆಗ ಯೋಚನೆಗಳೇ ಬರಲಿಲ್ಲ. ಸಾಲಿಗ್ರಾಮ ತೆಗೆದು ಚೇಳಿಗೆ ಮೋಕ್ಷ ಕೊಟ್ಟೆ ಆಗಲೇ ಸಾಲಿಗ್ರಾಮ ಚುಪ್ಪಾಚೂರಾದ್ದು. ಆಮೇಲೆ ನನ್ನ ತಲೆ ತಿಳಿಯಾಗಿ ಯೋಚಿಸ ಹತ್ತಿದ್ದು. ಅಲ್ಲಾ! ತಲ ತಲಾಂತರದ ಸಾಲಿಗ್ರಾಮ. ಈ ಚೇಳಿನ ತಲೆಗೆ ತಟ್ಟಿ ಹೀಗಾಗಬೇಕೇ? ಇದು ರಂಗಜ್ಜೀಗೆ ಗೊತ್ತಾದರೆ ಎಷ್ಟು ನೊಂದು ಕೊಂಡಾಳು. ಬೆಂಗಳೂರಿನಲ್ಲಿ ಹೀಗೆ ಚೇಳು ಕಂಡಿದ್ದರೆ, ಲೇ! ಚೇಳು ಥೇಳು ಎಂದು ಒಂದು ಬಾರಿ ಬೊಬ್ಬೆ ಇಡುತ್ತದೆ. ಆ ಬೊಬ್ಬೆಗೆ ಸುಸ್ತಾಗಿ ಚೇಳು ನನ್ನನ್ನೇ ಎವೆಯಿಕ್ಕದೆ ನೋಡುತ್ತಿತ್ತು. ನಮ್ಮಾಕೆ ಚಾಮರ ತಂದು ಮುಖ ಶಿಂಡರಿಸಿಕೊಂಡು ಎರಡು ಬಾರಿ ಬೀಸಿದರೆ ಚೇಳು ಪರಂಧಾಮವನ್ನು ಸೇರುತ್ತಿತ್ತು. ಚಾಮರವೂ ಶುದ್ಧಿಯಾಗುತ್ತಿತ್ತು.

ಇಲ್ಲಿ ಈ ಅನ್ನಾಹುತ ಆಗಿಹೋಯಿತು. ಏನುಮಾಡೋದು.

ಆಗ ಜ್ಞಾಪಕಬಂತು. ಹಿಂದಿನ ದಿನದ ಕೆರೆ ಅಂಚಿನ ಬೆಣಚುಕಲ್ಲು. ಕಿರು ಸದ್ದಿಲ್ಲದೆ, ಮರು ಯೋಚನೆಮಾಡದೆ ಅದನ್ನು ಕಿಟಕಿಯಿಂದ ತಂದೆ. ಅಭಿಷೇಕ ಮಾಡಿದೆ. ಸಂಪುಟದಲ್ಲಿಟ್ಟೆ.

ಇನ್ನೇನು ನೈವೇದ್ಯ ಮಾಡಬೇಕು. ಯಥಾಪ್ರಕಾರ ವೀಳ್ಯದೆಲೆ ತೊಟ್ಟು ಮುರಿಯೋದು ಎಂದಿದ್ದಾಗ ಘಮ ಘಮ ಎಂದು ವಾಸನೆ ಹೊಡೆಯಿತು. ಆ ಕಡೆ ತಿರುಗಿದರೆ ರಂಗಜ್ಜಿ ಹುಗ್ಗಿ ಪಾತ್ರೆ ತಂದು ನೈವೇದ್ಯಕ್ಕೆ ಇಟ್ಟಿದ್ದಾಳೆ.

'ಏನು ಕಳೆಯೋ ರಾಮು ದೇವರ ಪೂಜೆ ಮಾಡುವಾಗ ನಿನ್ನ ಮುಖದಲ್ಲಿ. ನಿಮ್ಮ ಅಜ್ಜನ ಹಾಗೇ ಕಾಣಿಸುತ್ತಿದ್ದೆ. ಎಂದು ಹೇಳಿ ನೆಟ್ಟಿಗೆ ಮುರಿದು ದೃಷ್ಟಿ ತೆಗೆದು ಹೋದಳು.

ಬೇಗ ನೈವೇದ್ಯಮಾಡಿ, ಮಂಗಳಾರತಿಮಾಡಿ ಹೊರಕ್ಕೆ ಬಂದೆ. ಅಂತಹಾ ಹುಗ್ಗಿ ಅಷ್ಟು ರುಚಿಯಾದದ್ದು ನಾನು ತಿಂದಿದ್ದೇ ಇಲ್ಲ. ಗಡದ್ದಾಗಿ ತಿಂದೆ. ಹಲ್ಲಿ ಗಂಟಿಕೊಂಡಿದ್ದ ಅಗಳುಗಳನ್ನು ಕಾಫಿಯ ಮೂಲಕ ನುಂಗಿದೆ.

ಮೂರನೆಯ ದಿನ ಬೆಳಿಗ್ಗೆ ರಂಗಣ್ಣ ಬಂದರು. "ಅಮುಲ್ದಾರರು ನನ್ನ ಕೆಲಸ ನೋಡಿ ಮೆಚ್ಚಿದರು. ನಾನು ನಾಲ್ಕು ವರ್ಷಗಳ ಹಿಂದೆ ಹಾಕಿಕೊಂಡಿದ್ದ ದರಕಾಸ್ತು ಜಮೀನನ್ನು ನನಗೆ ಕೊಡುವಂತೆ ಶಿಫಾರಸುಮಾಡಿದ್ದಾರೆ. ರಂಗಣ್ಣೋರ ಹಾಗೆ ಎಲ್ಲಾ ಹೋಬಳಿಗಳಲ್ಲೂ ಶಾನುಭೋಗರು ಕೆಲಸ ಮಾಡಿದರೆ, ಅಮುಲ್ದಾರರು

ಬೇಡವೇಬೇಡ ಎಂದು ಮುಕ್ತ ಕಂಠದಿಂದ ಹೊಗಳಿದರು ಎಲ್ಲಾ ನಮ್ಮ ಮನೆಯ ಪವಿತ್ರ ಸಾಲಿಗ್ರಾಮದ ಪೂಜಾ ಫಲ. ಇಂದು ವರಕೊಟ್ಟಿತು." ಎಂದರು.


* * *

ನಡೆದಿದ್ದನ್ನ ಹಾಗೇ ಹೇಳಿದರೆ ಖಂಡಿತಾ ಒಪ್ಪುಲ್ಲ ರಂಗಜ್ಜಿ ಅಲ್ಲವೇ?

ಅದಕ್ಕೆ ಮೌನವಾಗಿದ್ದೇನೆ. ಹೇಗೂ ನಾವು ಆವಾಹನೆ ಮಾಡಿದರೆ ಕಲ್ಲಿನಲ್ಲೂ ದೇವರೇ ಇರುತ್ತಾನೆ ಅಲ್ಲವೇ? ಹಾಗೂ ಗಂಗಾ ನೀರಿನಿಂದ ತೋಯ್ಸಿರೇ ಸಾಲಿ ಗ್ರಾಮ. ಕೆರೆ ನೀರಿನಿಂದ ತೋಯ್ದರೆ ಅಲ್ಲಾ ಎಂದು ಎಲ್ಲೂ ಹೇಳಿಲ್ಲ ಅಲ್ಲವೇ?

—ಕುಮಾರ್

—o—



ಆ ಖೂನಿ ಮೊಕದ್ದಮೆಯಲ್ಲಿ ಅಪರಾಧಿ ಸಿಗೋತನಕ ನೀನು ಹೊರಗೆ ಕಾಣಿಸಿಕೊಳ್ಳೋದು ಒಳ್ಳೆಯದಲ್ಲಪ್ಪಾ !

ಭಲೇ ! ವಸ್ತಾದಿ !!

ಅವನನ್ನ ಕಡಿದರೆ ಸುಮಾರು ಆರು ಜಟ್ಕಾ ತುಂಬ ಬಹುದು ಎನ್ನಿಸುತ್ತಿತ್ತು. ಹಾಗೆ ಅಘೋರವಾಗಿ ಬೆಳೆದಿದ್ದ-ಕೆಟ್ಟ ಕನಸು ಕಂಡಂತಿದ್ದ. ಆದರೆ ಎದುರಾಳಿ ಸಾಮಾನ್ಯ ನರ ಮನುಷ್ಯನಂತೆಯೇ ಇದ್ದ. ಕಡಿದರೆ ಎರಡೇ ಜಟ್ಕಾ ತುಂಬುವಂತ ವನು. ಆದರೂ ಪಾದರಸದಂತೆ ಹಾರಾಡುತ್ತಿದ್ದ. ಎದುರಾಳಿಯ ಎಡಗೈಯನ್ನು ಬೆನ್ನ ಹಿಂದಕ್ಕೆ ಬಗ್ಗಿಸಿ ಮೆಲ್ಲಗೆ ತಿರುಗಿಸಲು ಪ್ರಾರಂಭಮಾಡಿದ. ಥಡಿಯ ವಸ್ತಾದಿ ಕೊಯ್ಗುಟ್ಟಲು ಆರಂಭಿಸಿದ. ಎಷ್ಟು ರೌದ್ರವಾಗಿ ರಾಗವಾಗಿ ಬೋಲ ಬೋಲ ಮಾಡಿದ ಅಂತೀರಿ? ಮುಖ ನೋಡಿದರೆ ಬೇನೆ ಬಂದವರ ಮುಖಾನೇ! ಅಯ್ಯೋ! ಪಾಪ! ಎಷ್ಟು ನೋವಾಗುತ್ತೋ ಪಾಪ! ಎನ್ನಿಸಿತು. ಆದರೆ ನನ್ನ ಪಕ್ಕದಲ್ಲಿದ್ದ ಕೊರವ ಬಿಕ್ಕಿ ಬಿಕ್ಕಿ ನಗುಕ್ಕೆ ಶುರುಮಾಡಿದ. "ಏಕೋ ಹಾಗೆನಗ್ತಿ. ಎಂತಹಾ ಪಟ್ಟಿನಲ್ಲಿ ಆ ಥಡಿಯ ಸಿಕ್ಕಿಹಾಕಿಕೊಂಡಿದ್ದಾನೋ?" ಎಂದೆ.

ಮೊದಲನೆಯ ರೌಂಡ್ ಮುಗಿದ ಗಂಟೆ ಬಾರಿಸಿತು.

'ಅಯ್ಯೋ ಮಂಕೆ! ಚೆನ್ನಾಗಿನೋಡು! ಥಡಿಯನ ಕೈ ಅವನ ಬೆನ್ನ ಹಿಂದೆ ಇದೆ ದಿಟ. ತನ್ನ ಕೈಯನ್ನೂ ಅವನ ಕೈ ಸುತ್ತಲೂ ತಿರುಗಿಸ್ತಾ ಇದಾನಯೇ ಹೊರ್ತು ಅವನ ಕೈಯೆನ್ನು ತಿರುಚುತ್ತಲೇ ಇಲ್ಲ. ಅಂದ ಮೇಲೆ ಥಡಿಯ ಈ ರೀತಿ ಮುಖ ಮಾಡಬೇಕಾದರೆ ನಾಟಕದ ಕಂಪೆನಿಯಲ್ಲಿ ಬಲು ದಿನ ತಯಾರಿ ತೆಗೆದು ಕೊಂಡಿರಬೇಕು ಹಾಗೆ ವಿಕಟವಾಗಿ ಕೂಗಬೇಕಾದರೆ, ಹಾರ್ಮೋನಿಯಂ ಹಿಡಿದು ಸಂಗೀತ ಕಲಿತಿರಲೇಬೇಕು. ಅಥವಾ ಇವೆಲ್ಲಾ ಸಾಂಗವಾಗಿ ಕಲಿಸಲು ಇವರುಗಳೇ ಒಂದು ವಿಶ್ವವಿದ್ಯಾಲಯವನ್ನೇ ಗುಟ್ಟಾಗಿ ಏರ್ಪಡಿಸಿಕೊಂಡಿದ್ದಾರೇನೋ? ಯಾರಿಗೆ ಗೊತ್ತು? ಅಂದ.

ಆ ಹೊತ್ತಿಗೆ ಮೂರನೆಯ ರೌಂಡ್ ಗಂಟೆ ಬಾರಿಸಿತು ಥಡಿಯ ಅಂಗತನಾಗಿ ಬೀಳುವಂತೆ ಟಾಂಗ್ ಕೊಟ್ಟ ಕಿರಿಥಡಿಯ. ತಕ್ಷಣ ದೊಡ್ಡ ಥಡಿಯ ಬಲಗಾಲನ್ನು ಬಗ್ಗಿಸಿ ಎತ್ತಿದ. ಪಾದಕ್ಕೆ ಹಾಕಿದ್ದ ಪಾದರಕ್ಷೆಯನ್ನು ಹಿಡಿದು ತಿರುಚಲು ಶುರು ಮಾಡಿದ. ದೊಡ್ಡ ಥಡಿಯ ತಿರುಗಿ ಶುರು, ಬೋಲ ಬೋಲಕ್ಕೆ!! ಆದಕ್ಕೆ ಅವನೇ ತಾಳ ಹಾಕಲು ಶುರುಮಾಡಿದ್ದ. ನೆಲವನ್ನು ಎರಡೂ ಕೈಗಳಲ್ಲೂ ಕುಟ್ಟುತ್ತಾ.

ಆ ನೆಲಕ್ಕೇ ಲೌಡ್‌ಸ್ಪೀಕರ್ ವ್ಯವಸ್ಥೆಮಾಡಿದ್ದರೋ ಏನೋ ಅಖಾಡಾದಲ್ಲೆಲ್ಲಾ ಡಬಡಬ ಶಬ್ದ—

ಆದರೆ ಆ ಬೂಡ್ಸನ್ನ ತಿರುಚೋವಾಗ ಚಿಕ್ಕಧಡಿಯ ಸ್ವಲ್ಪ ಬೇಹುಷಾರಿ ಆದ ಅಂತ ಕಾಣುತ್ತೆ. ಆ ಬೂಡ್ಸಿನ ಅಟ್ಟೀನೇ ತಿರುಚಬೇಕಾಗಿದ್ದರೆ ಚಿಕ್ಕ ಧಡಿಯ ಎಷ್ಟು ಅಭ್ಯಾಸಮಾಡಿರಬೇಕು ಎಷ್ಟು ಕೈ ಚಳಕ ಇರಬೇಕು. ಇದನ್ನು ಅವರ ಗುಪ್ತ ವಿಶ್ವವಿದ್ಯಾಲಯದಲ್ಲಿ ಹೇಳಿಕೊಡುತ್ತಾರೋ ಎಂದೆನ್ನಿಸಿತು.

ಹೊರಗೆ ಬರುತ್ತಿದ್ದಾಗ ಯಾರೋ ಅನ್ನುತ್ತಿದ್ದರು "ಒಬ್ಬೊಬ್ಬ ವಸ್ತಾದಿಗೂ ಒಂದು ಸಾವಿರ ರೂಪಾಯಿಂತೆ, ಈ ನಾಟಕ ಆಡುಕ್ಕೆ—ಆ ರೆಫ್ರಿಗೆ ಕೂಡ ಒಂದು ಸಾವಿರ ರೂಪಾಯಂತೆ." ಅಂತ

ಹದಿನಾರು ಕುರಿ ತಿಂತಾನಂತೆ ಧಡಿಯಾ ಎಂದೊಬ್ಬ.

ಎಂಟು ಹುಲಿಗಳನ್ನು ತಿಂದಿರುವೆನು, ಹದಿನಾರು ಆನೆಗಳನ್ನೂ ನುಂಗಿರುವೆನು ಎನ್ನುವ ಕತೆ ಜ್ಞಾಪಕಕ್ಕೆ ಬಂತು. ಇವೆಲ್ಲಾ ಕೇಳಿದಾಗ.

ಭಲೆ! ವಸ್ತಾದಿ!! ಈ ನಾಟಕ ಹೂಡೋದನ್ನ, ಈ ದುರ್ಭಿಕ್ಷಕಾಲದಲ್ಲಿ ಹೂಡಿ ಹಣ ಸುಲಿಯುತ್ತೀಯಲ್ಲ! ನೀನೇ ಧೀರ, ನೀನೇ ರುಸ್ತುಂ ಎಂದಂದುಕೊಂಡೆ.

—ಬಚ್ಚ.



ಇವರೇ! ಶಾಂತಿ ಸಮ್ಮೇಳನದಲ್ಲಿ ಅಮೋಘ ಭಾಷಣ ಮಾಡಿದವರು.
—ಓಹೋ! ನಂತರವೇ ಅಲ್ಲಿ ಯುದ್ಧ ಶುರುವಾಯ್ತಲ್ಲವೇ?

ನಮ್ಮಗ್ಗಲುಮನೆಯಲ್ಲಿ

"ಲೋ ಬಂದ್ನೇನೋ!"

"ಬಂದ್ಯಾ ಮಗೂ, ಬಾ"

"ಬಾರೋಲ್ಲೀ, ಎಲ್ಲೋ ಪೇಪ್ರು?"

"ತಗೋಪ್ಪಾ....ಬಹಳ ಸುಲಭ"

"ಏನೋ ಸುಲ್ಭ? ಬಾರೋಲ್ಲಿ"

"ಕ್ಲಿಯರ್ ಮಾಡಿದೀನಪ್ಪಾ"

"ಲೇ, ಆ ಕನ್ನಡ್ಕ ಕೊಡೇಲ್ಲೀ"

"ಅಯ್ಯೋ ಈಗೇನೋತ್ತೀರೀಂದ್ರೆ; ಮಗು ಊಟ ಮಾಡ್ಲಿ. ಮುಖ ನೋಡೀಂದ್ರೆ ಎಷ್ಟ್ಕೆಂಪ್ಗಿದೆ!"

"ಊಟ ಆಮೇಲ್ಮಾಡ್ದೋ, ಈಗ ಇಲ್ಲಿ ಉತ್ರ ಹೇಳ್ಬಾ"

"ಫಸ್ಟ್ ಕೊಶ್ನೇಗೆ ಆರ್ಪೇಜ್ಬರ್ದಿದೀನಪ್ಪಾ"

"ಏನೋದು ಫಸ್ಟ್ ಕೊಶ್ನೆ? ನಿನ್ಪಿಂಡ! ಕೊಶ್ಚನ್ನೋ ಗೂಬೆ! ಕೊಶ್ಚನ್ನು!"

"ಊ....ಅದೇನಪ್ಪಾ, ಕೊಶ್ನೆಚ್ಚನ್ನು, ಅದಕ್ಕಾರ್ಪೇ........"

"ಕೊಶ್ಚನ್ನೋ ಕತ್ತೆ!"

"ಥೂ ಸುಮ್ನಿರೀಂದ್ರೆ, ಮಗು ಬೆವರಿಸುಸ್ತಾಗಿ ಬಂದಿರೋದ್ಕಾಣೋಲ್ವೇಂದ್ರೆ?"

"ಲೇ....ನೀನ್ಸುಮ್ನೆ ನಿನ್ನ ಆ ಹಾಳು ಸ್ವೆಟ್ಟರ್ನ ಹೊಲೀತಾಇತ್ತಿಯೋ, ಆ ಉಣ್ಣೆದಾರ್ನುಂಡೇನ ಬಾಯಲ್ತುರಕ್ಲೋ?....ಈಗ ಹೇಳೋ"

"ಕೊಶ್....ಕೊಶ್ಚನ್"

"ಆ, ಸರಿ. ಎಲ್ಲಿ ಏನೋ ಫಸ್ಟ್‌ಕೊಶ್ಚನ್ನು?....ಊ....'ಅಶೋಕನು ಯಾರು? ಅವನ ತಾತನ ಹೆಸರೇನು? ಅವರು ಮಾಡಿದ ಕೆಲಸಗಳೇನು?' ಓಹೋ! ಅಶೋಕನು ಯಾರೋ?"

"ಅಶೋಕ್ನೇನಪ್ಪಾ?"

"ಊನೋ, ಅಶೋಕ."

" ಅಶೋಕ್ನೇ? ಓ ಅಶೋಕ್ನೇನಪ್ಪಾ? ಗೊತ್ತಿಲ್ವೆ? ಅದೇ, ಸಾಲು ಮರಗಳನ್ನು ನೆಟ್ಟವನು, ಭಾವಿಗಳನ್ನು ತೋಡಿಸಿದವನು, ಛತ್ರಗಳನ್ನು...."

" ನಿನ್ನ ಪಿಂಡವನ್ನು ತಿಂದವನು...."

" ಅಯ್ಯೋ, ಥೂ ಥೂ, ಸುಮ್ನಿರೀಂದ್ರೆ! ಚಾ ಮಗೂ ಕೈಕಾಲ್ತೊಳ್ಕೊ ಊಟ ಮಾಡು....ಆಮೇಲಾಗ್ಲೀಂದ್ರೆ ನಿಮ್ಮ್ರಾದ್ಧಾಂತ"

" ನಂಗ್ಹಸ್ವಿಲ್ಲಮ್ಮಾ"

" ಅಶೋಕನು ಯಾರೋ?"

" ಯಾಕೋ ಹಸ್ವಿಲ್ಲ? ಏನ್ತಿಂದೆ ಮಗೂ?"

" ಅಶೋಕನು ಯಾರೋ?"

" ಪರೀಕ್ಷೆ ಮುಗಿಸ್ಕೊಂಡು ಬರ್ತಾ ಲಕ್ಷ್ಮೀನರಸಮ್ನೋರ್ಮಗ ವೆಂಕ್ಟ ಅವನ್ಮನೇಗೆ ಕರ್ಕೊಂಡ್ಹೋಗಿ ಉಪ್ಪಿಟ್ಕೊಟ್ನಮ್ಮಾ"

" ಹೌದಾ? ಲಕ್ಷ್ಮೀನರಸಮ್ನೋರ್ಮನೇಗ್ಹೋಗಿದ್ಯಾ? ಹಿ! ಹಿ!! ಅವ್ರಳಿಯ ಬಂದಿದ್ದ್ರೇನೋ?"

" ಅಶೋಕನು ಯಾರೋ?"

" ಊ. ಬಂದಿದ್ದ್ರಮ್ಮಾ"

" ಅಶೋಕನು ಯಾರೋ?"

" ಥೂ, ಅದೇನಶೋಕ ಅಶೋಕಾಂತ ಬಡ್ಕೋಳ್ತೀರೀಂದ್ರೆ! ನಾನ್ಕೂಡ ಓದೀದೀನಿ. ಅವನು ಮಗಧ ದೇಶದ ರಾಜನಾಗಿದ್ದ....ಮಗೂ,...."

" ಲೇ ನಿನ್ಪಾಂಡಿತ್ಯ ಇಲ್ಲೆಲ್ಬೇಡ್ವೇ....ಸ್ವಲ್ಪ ಸುಮ್ನಿರೇ...."

" ನೀವ್ಸುಮ್ನಿರೀಂದ್ರೆ....ಮಗೂ, ಅವ್ರಳಿಯ....ಅವ್ರ ಹೆಸರೇನಮ್ಮಾ!....ಥೂ ನಾಲ್ಗೇತುದೀಲ್ಲೆ ಇದ್ಯಲ್ಲಾ....ಅಯ್ಯೋ ಸ್ವಲ್ಪ ಹೇಳೀಂದ್ರೆ....

" ಏನೇ?"

" ಲಕ್ಷ್ಮೀನರಸಮ್ಮೋರಳಿಯನ್ಹೆಸ್ರೇನ್ಲೇಂದ್ರೆ"

" ಲೇ, ನಂಗೆ, ಲಕ್ಷ್ಮೀನರಸಮ್ನೋರಳಿಯಂದಿನ ಹೆಸರ್ಗಳನ್ನ ಉರು ಹಚ್ಕೋದೇನೇ ಕೆಲ್ಸ?...." ಲೋ, ಹೋಗ್ಲಿ ಅಶೋಕನ ತಾತನ ಹೆಸರೇನೋ"

" ಓ, ಅಶೋಕನ್ನ ತಾತನೇನಪ್ಪಾ?"

" ಊ"

" ಅಶೋಕನ ತಾತ್ನೇ? ಅಶೋಕ್ನ...."

“ಲೋ ನೀನು ಸುಮ್ನೆ ಎಂಜಲ್ನುಂಗ್ತಾ ಇರ್ಬೇಡ....ಹೇಳೋ, ಅದ್ಯೇನ್ಬರ್ದ್ವೋ ಆರ್ಪೇಜ್ನಲ್ಲಿ....”

“............ . ....”

“ಊ....ನಂಗೂ ಏಕೋ ಮರ್ತ್ತಂಗಿದೆ... ಇಪ್ಪತ್ತ್ವರ್ಷದ ಹಿಂದೆ ಓದಿದ್ದು.... ಅಲ್ವೋ ಪರೀಕ್ಷೇಗೋದಿದ್ದೀಯ! ಅಶೋಕನ ತಾತ್ನೆಸ್ರು ಬರೋಲ್ವೇನೋ?”

“ಸಿಕ್ತೋಂದ್ರೆ ಸಿಕ್ತು. ನಿಮ್ಗೆಲ್ಲಿರ್ಬೇಕು ಜ್ಞಾಪ್ಕ! ಶ್ರೀಪಾದ್ರಾಯ್ರು!!”

“ಏನೇ, ಅಶೋಕನ ತಾತನ ಹೆಸರು, ಶ್ರೀಪಾದ್ರಾಯ್ರೇನೇ?”

“ಥೂ ನಿಮ್ಮ ಹಾಳು ಅಶೋಕನ್ನ ಸುಡೀಂದ್ರೆ. ಅದೇ, ಲಕ್ಷ್ಮೀನರಸಮ್ನೋರ ಳಿಯನ್ಹೆಸ್ರು, ಶ್ರೀಪಾದ್ರಾಯ್ರೂಂತ!”

“ಓ”

“ನಾಲ್ಗೇತುದೀಲ್ಲಿದ್ರೂ ಇಷ್ಟೊತ್ತಾಯ್ತು ಹೊರಗ್ಬರೋಕ್ಕೆ! ಮಗೂ, ಶ್ರೀಪಾದ್ರಾಯ್ರು ಬರ್ತಾ ಏನೇನ್ತಂದಿದ್ರೋ?”

“ವೆಂಕ್ಟನ್ಗೆ ಚಡ್ಡೀ ಬಟ್ಟೆ, ಒಂದ್ಚೆಂಡು, ಒಂದ್ಪ್ಲಾಸ್ಟಿಕ್ ಯೋ ಯೋ....”

“ಅದೆಲ್ಲಾ ಇರ್ಲೀ, ಸೀರೆ ಗೀರೆ....ಜಾಕೇಟ್ಬಟ್ಟೇಗಿಟ್ಟೇ. ?”

“ನಾನ್ನೋಡ್ಲಿಲ್ಲಾಮ್ಮಾ”

“ಹೋಗ್ಲಿ ಬಿಡು ...ನಿಂಗನ್ನ ಬಡ್ಸಿಟ್ಟು ಅಡ್ಗೆಮನೆ ಸಾರ್ಸಿ ಹಾಗೇ ಹೋಗ್ಬಂದ್ರಾಯ್ತು....ಇಲ್ನೋಡೀಂದ್ರೆ, ಆ ಶ್ರೀಪಾದ್ರಾಯ್ರಿದ್ದಾರಲ್ಲ, ಚಿನ್ನದಂತ ಮನುಷ್ಯರೂಂದ್ರೆ”

“ಕಲ್ಲಿದ್ಲೆ”

“ಆ?”

“ಕಲ್ಲಿದ್ಲು”

“ಕಲ್ಲಿದ್ಲು”

“ಕಲ್ಲಿದ್ಲು?”

“ಓ, ಸ್ವಲ್ಪ ಕಪ್ಗಿದ್ರೆ ಏನ್ಮಹಾ ಕೊಚ್ಕೊಂಡ್ಹೋಗಿದ್ದು! ನೀವ್ಮಾತ್ರ ಅಧೆಷ್ಟೆಳ್ಗಿದ್ದೀರೀ ಅದೇನ್ಕಥೇ! ಕಪ್ಗಿದ್ರೂ ಒಳ್ಳೇವ್ರೂಂದ್ರೆ”

“ಸರೀ ಕಣೇ, ಸರಿ!....ಲೇ....ಅವ್ನೆಲ್ಲೀ....ಲೋ....ಬಾರೋಲ್ಲೀ....ಏನೋ ಪುಸ್ತಕ್ದಲ್ಲಿ ನೋಡ್ತಾದ್ದೀಯಾ?....ಥೂ ನಿನ್ನ.”


"ಶ್ಯ್ ಸಾಕೂಂದ್ರೆ! ಸಾಕು. ಬಾಮಗೂ, ಬೇಗ್ಬಾ. ಸಿಂಗ್ಬೇಗ ಬಡ್ಸಿ, ಲಕ್ಷ್ಮೀನರಸಮ್ಮೋರ್ಮನೇಗ್ಹೋಗ್ಬರ್ಬೇಕು ಅಯ್ಯೋ, ಹೊತ್ತಾದ್ರೆ ಅಪ್ರು ನಾಗಮ್ನೋರ್ಮನೇಗೋಗ್ಬಿಡ್ತಾರೆ. ಬೇಗ್ಬಾರೋ ಮಗೂ."

"ನಿಲ್ಲೊ, ಬಾಕೀ ಕೊಶ್ಚನ್ಸ್ ಹೇಗಿದ್ವೋ?"

"ಯಾರನ್ನಾದ್ರೂ ಕಣೇ ಕೇಳೀಂದ್ರೆ, ಬಾರೋ ಮಗೂ, ಬಾಪ್ಪ ಬೇಗ ಬಡ್ಸ್ಬಿಡ್ತೀನಿ ಅಂದ್ಹಾಗೇ, ಬಿಸಿಲ್ಮಾಡೀ ಮೇಲಿ ಸಂಡ್ಗೆ ಒಣ್ಹಾಂಕ್ಕೇದೀನಿ, ಸ್ವಲ್ಪೆತ್ತಿಡ್ಬಿಡೀಂದ್ರೆ... ನಂಗ್ಹೊತ್ತಾಗೋಯ್ತು...."

"ಲೇ ...ಲೋ ..."

—ದಾಮೋದ್ರ.



ನಿನ್ನ ತೌರುಮನೆ ಬಳ್ಳಾರಿ ಇರಬಹುದು, ಬಳ್ಳಾರಿ ಮೈಸೂರಿಗೆ ಸೇರಿರಬಹುದು
ಆ ಮಾತ್ರಕ್ಷಣ, ಹೊಸ ಸೀರೆ ಕೇಳೋದು ನ್ಯಾಯವೇನೇ?

ಸಿನಿಮೀಯ ವೈಚಿತ್ರ

……ಚಿತ್ರವನ್ನು ಹನ್ನೆರಡು ವರ್ಷಗಳ ನಿರಂತರ ಪರಿಶ್ರಮದಿಂದ ತಯಾರಿಸ ಲಾಗಿದೆ. ಅನೇಕ ವರ್ಷಗಳಿಂದ ಬಕಪಕ್ಷಿಯಂತೆ ನೀವು ಕಾದು ಕುಳಿತ ಕಲಾಕೃತಿ ತೆರೆಗೆ ಬಂದಿದೆ.

—ಹನ್ನೆರಡು ವರ್ಷಗಳಲ್ಲಿ ಹನ್ನೊಂದು ವರ್ಷ ಬರೀ ಧನಶ್ರಮವೇ ಆಗಿರ ಬೇಕೆಂದು ನಮ್ಮ ಕುತಂತ್ರಿಯ ವಾದ.

*　　　*　　　*

……..ಚಿತ್ರದ ಮುಹೂರ್ತ ಸಮಾರಂಭವನ್ನು ತಾರಾಬಲ ಚಂದ್ರಬಲ ನೋಡಿ ತಾ॥ನ ದಿನ ಏರ್ಪಡಿಸಲಾಗಿತ್ತು. ಆದರೆ ಅನಿವಾರ್ಯ ಕಾರಣಗಳಿಂದ ಮುಂದು ವರಿಸಲಾಯಿತು. (ವಾರ್ತೆ)

—ತಲಾಷ್ ಮಾಡಲಾಗಿ ತಾರೆಯರ ಬೆಲೆ ಚೇಳಿನ ವಿಷದಂತೆ ಏರಿದ್ದರಿಂದ, ನಿರ್ಮಾಪಕರು ಅನಿವಾರ್ಯವಾಗಿ ಮುಂದೆ ಹಾಕಿದರಂತೆ. ಮುಖ್ಯ ನಿರ್ಮಾತೃ ವಿನ ತಾರಾಬಲ ಚೆನ್ನಾಗಿಲ್ಲ ಅಷ್ಟೆ.

*　　　*　　　*

……..ಚಿತ್ರದ ನಾಯಕ ಗಂಭೀರ ಸನ್ನಿವೇಶಕ್ಕಿಂತ ಹುಚ್ಚನಾಗಿ ಅಭಿನಯಿಸು ವಾಗ ಪಾತ್ರಕ್ಕೆ ಜೀವಂತ ಕಳೆ ತುಂಬಿತ್ತು. (ವಿಮರ್ಶಕ)

—ಪ್ರೇಕ್ಷಕರಲ್ಲಿ ಅನೇಕರು ಈ ನಾಯಕ ಮೊದಲಿಂದಲೂ ಹುಚ್ಚನಾಗೇ ಇದ್ದಿ ದ್ದರೆ ಏಸೊಂದು ತಲೆ ಶೂಲೆ ಕಡಿಮೆಯಾಗುತ್ತಿತ್ತು! ಅಂದುಕೊಂಡರಂತೆ.

*　　　*　　　*

ಚಿತ್ರಕಥೆ–ನಾಯಕ–ನಾಯಕಿ–ಖಳ–ಖಳಿ (ಸ್ತ್ರೀಲಿಂಗಃ) ಹಾಡು–ಸಂಗೀತ– ನಿರ್ದೇಶಕ–ಸಂಪಾದಕ–ಎಲ್ಲಾ ಅಣಿಯಾಗಿದೆ–ಇನ್ನೇನು ಚಿತ್ರದ ಷೂಟಿಂಗ್ ಪ್ರಾರಂಭಿಸುವುದಕ್ಕೆ ಹಣ ಒದಗಿಸುವವರು ಮಾತ್ರ ಸಿಕ್ಕಬೇಕು ಅಷ್ಟೆ.

*　　　*　　　*

ಸಿನಿಮಾ ಥಿಯೇಟರಲ್ಲಿ ಗೇಟ್ ಕೀಪರಾಗಿದ್ದ....ರಾಯ ತನ್ನ ಅಂಗಸೌಷ್ಟವಕ್ಕೆ ನಾಯಕನಾಗುವುದೇ ಸರಿ—ಈ ಬ್ಯಾಟರಿ ಹಿಡಿದು ಸೀಟು ಹುಡುಕಿಕೊಡುವ ಕೆಲಸ ಸಾಕು ಎಂದು ಸಿನಿಮಾ ಸ್ಟುಡಿಯೋ ಸೇರಿದ. ಅಲ್ಲೂ ಅವನಿಗೆ ಸಿಕ್ಕಿದ್ದು ಸೆಟ್ಟಿನ ಮೇಲೆ ಲೈಟ್ ಬಿಡೊ ಕೆಲಸವೇ ಆಯಿತು. "ಯಾಕೊ?" ಅಂದಾಗ. "ಡೈರೆಕ್ಟರು ಅಂದರು—ನನಗೆ ಅಂಗ ಬಲ ಮಾತ್ರ ಇದೆ—ತಲೆ ಖಾಲಿ ಅಂತ—ಅದಕ್ಕೆ ಲೈಟ್ ಬಾಯ್ ಕೆಲಸ" ಅಂದ.

*　　　*　　　*

"ನೀನೇನಂದೆ ಆಗ" ಎಂದಾಗ "ಸರಿ ಸಾರ್ ನಿಮ್ಮ ಹಾಗೆ ಅಂಗವೂಕೃಶ ತಲೆಯೂ ಬರಿದು ಎರಡು ಆಗಿದ್ದರೆ ನಾನೂ ಡೈರೆಕ್ಟರೇ ಆಗ್ತಿದ್ದೆ...." ಎಂದು ಹೇಳಿ ಹೊರಟೇಹೋದ ರಾಯ.

*　　　*　　　*

.......ಚಿತ್ರದ ಕಥೆ-ಹಾಡು—ಅಭಿನಯ ಛಾಯಾಗ್ರಹಣ—ಶಬ್ದಗ್ರಹಣ—ನಿರ್ದೇಶನ ಇನ್ನಷ್ಟು ಬಿಟ್ಟು ಮಿಕ್ಕದ್ದೆಲ್ಲಾ ಚೆನ್ನಾಗಿದೆ. ಮಿಕ್ಕದ್ದೇನು?

—ಇಂಥಾ ಚಿತ್ರವನ್ನು ವಿಮರ್ಶಿಸಿದ ಮನೋಬಲ ಶ್ಲಾಘನೀಯವೆ.

*　　　*　　　*

........ಚಿತ್ರಕಥೆ ಹೀಗೆ ಸಾಗಿ ಕಡೆಗೆ ೨೪೦೦೦ ಅಡಿಗಳ ನಂತರ ನಾಯಕ ನಾಯಕಿ ಒಂದೇ ಹಗ್ಗದಲ್ಲಿ ನೇಣುಹಾಕಿಕೊಂಡು ಸಾಯುವರು.

—ಅಯ್ಯೋ....ಅದೇ ಹಗ್ಗವನ್ನು ಮೊದಲನೇ ದೃಶ್ಯದಲ್ಲೇ ಒದಗಿಸಿದ್ದರೆ ಪ್ರೇಕ್ಷಕರನ್ನು ಉಳಿಸಬಹುದಾಗಿತ್ತಲ್ಲಾ!!

*　　　*　　　*

—ಈಗೀಗ ಹಾಲಿವುಡ್ ತಯಾರಕರು ತಾರೆಯರಿಗಾಗಿ ಮಾಡುವ ಉಡುಪಿನ ಖರ್ಚು ಇಳಿಮುಖವಾಗುತ್ತಿದೆ.

—ಅರೆ! ಆಶ್ಚರ್ಯ!! ಹಾಲಿಉಡ್ ಚಿತ್ರದ ತಾರೆಯರು ಉಡುಪು ಹಾಕುತ್ತಾರೇನು? ಇದು ಹೊಸ ಸುದ್ದಿ.

*　　　*　　　*

ಮುಂಬಯಿ—ಮದರಾಸುಗಳಲ್ಲಿ ಸಿನಿಮಾ ತಾರೆಯರು ಹೊಸ ಫ್ಯಾಷನ್‌ಗಳನ್ನು ಕಲಿಯುವುದಕ್ಕೆ ವಿದ್ಯಾರ್ಥಿನಿಯರ ಕಾಲೇಜು—ಹಾಸ್ಟೆಲುಗಳಿಗೆ ಭೇಟಿಕೊಡುತ್ತಿದ್ದಾರಂತೆ.

—ಯಜ್ಞಪಶು.

——o

ದಫೇದಾರ್ ದೇರಣ್ಣೋರು

" ಸಿರಸ್ತೆದಾರ್ರು "

"ಅಣ್ಣಾವರ—ಸರಪೇನಹಳ್ಳಿ-ಬೂದನೂರು-ಅವರೇಹಳ್ಳಿ-ಅಮರಾಪುರ ಈ ಹೋಬಳಿಗಳ ನೆನಪಿಗೆ ಬರುತ್ತೆ ನೋಡಿ ನೀವು ಈಗ ಹೇಳಿದ್ದು ನೋಡಿದರೆ" ಎಂದೆನ್ನುತ್ತಾ ಬೆಲ್ಟು ಬಿಗಿದರು ದೇರಣ್ಣೋರು. ನಾನು ರಿಕಾರ್ಡುಗಳ ಕಂತೆ ಕೋಂಕಳಿಗಿರಿಸಿ ಕಚೇರಿಯಿಂದ ಹೊರಬೀಳಲು ಹವಣಿಸಿದೆ. ಶ್ರೀಮಾನ್ ದೇರಣ್ಣೋರ ಮಾತಿಗೆ ಸಿಕ್ಕುಬಿದ್ದರೆ ಬೇಡಿಗೆ ಕೈ ಕೊಟ್ಟಂತೇ ಸರಿ. ಮಹರಾಯ ಸುಸ್ತುಮಾಡಿ ಸೊರಗಿಸಿಬಿಡುತ್ತಾನೆ. ಯಾವುದೋ ಕಥೆ ಎಲ್ಲಿದೋ ಪುರಾಣ ಕಟ್ಟಿಕೊಂಡು ನಮಗೇನು. ಗುಂಡಾಚಾರಿ ಬೀಡಿ ಕುಡಿತಿದ್ದಾಗ ಅಮಲ್ದಾರ್ರು ನೋಡಿದರು. ಅಮಲ್ದಾರು ಭಂಗಿ ಹೊಡೆದದ್ದು ದುಪ್ಪಟಿ ಕಮಿಷನ್ನರು ಕಂಡರು- ಇದರಿಂದ ನಿಮಗೆ ಭಡ್ತಿ ಬಂದೆ? ನಮ್ಮ ಕೆಲಸವೇನು ಚಾಕರಿ ಏನು ಬೊಗಳಿ ತಿಂಗಳಾಗುತ್ತಲೂ ಸಂಬಳಕ್ಕೆ ಕೈ ಒಡ್ಡೋಣ ಎಂಬ ಸಭ್ಯ ಜಾಯಮಾನವೇ ಅಲ್ಲ ಮನುಷ್ಯನದು. ಮನೋಶಾಸ್ತ್ರ ಪಂಡಿತರನ್ನೂ ವಿಚಾರಿಸಿದೆ—"ಇದೇನು ಪ್ರಕೃತಿ ಈ ಮನುಷ್ಯಂದು ಪ್ರಾಣಿ ಇಷ್ಟು ಹರಟೆತ್ತಲ್ಲ—ಇನ್ನು ಕೈ ಹಿಡಿದಾಕೆ ಹೇಗೆ ಸಹಿಸಾಳು ಈತನ ಪ್ರಲಾಪಾನ" ಅಂತ, ಆ ಪಂಡಿತರು ಹೇಳಿದರು—"ಮನೇಲಿ ಮನುಷ್ಯ ನರಂ ಆಗಿರ್ತಾನೆ—ಯಾವಾಗ ಮನೇಲಿ ಬಾಯಿ ಮುಚ್ಚಿಕೊಂಡಿರೋ ಪ್ರಸಂಗ ಬಂತೋ ಇನ್ನು ಅಡಗಿದ ಸುಪ್ತ ವಾಕ್ಝುರಿ ಹೇಗೆ ಹೊರಬೀಳಬೇಕು—ಅದಕ್ಕೆ ಕಚೇರಿಯ ಗುಮಾಸ್ತೆಗೆಳೆಯರೇ ಬಲಿ ಆಗಬೇಕು" ಎಂದು. ಅದಕ್ಕೊಸ್ಕರಲೇ ಇರಬೇಕು ಆಸಾಮಿ ಸಾವಂತ್ರಮ್ಮನೋರನ್ನ ಕಂಡರೆ ಡಿ.ಡಿ.ಟಿ. ಕಂಡ ತಿಗಣೆ ಹಾಗೆ ಮುದುಡಿ ಹೋಗುತ್ತಾನೆ. ನನ್ನ ಪಾಡಿಗೆ ನಾನು ಬೇಗ ಗೂಡು ಸೇರಬೇಕೆಂದು "ದಫೆದಾರ್ರೇ ಬೆಳಗಿನಿಂದ ಸಂಜೆವರಗೂ ಈ ಕಚೇರಿ ಕೆಲಸದಲ್ಲಿ ಬೆಂದಮೇಲೆ ಮನೆಗೆ ಯಾವಾಗ ಹೋದೇನೋ ಅನ್ನಿಸತ್ತೆ ಅಲ್ಲವೆ?" ಎಂದು ಜೋರಾಗಿ ಕಾಲುಹಾಕಿದೆ. ಆ ಮನುಷ್ಯ "ಅಲ್ಲ" ಎಂದುಬಿಟ್ಟ ಗುಂಡು ಹೊಡೆದಹಾಗೆ. ಹಾಕುತ್ತಿದ್ದ ಕಾಲಿನ ವೇಗ ಕುಂಟಿತು. "ಹೌದಾ!!" ಎಂದು ಆಶ್ಚರ್ಯಪಟ್ಟು ನಿಂತಾಗ ನನ್ನ ಮನಸ್ಸೂ "ಅಲ್ಲಾ" ಎಂದು ಹೇಳಿತು. ಮನೆ—ಅದರೊಡನೇ ಮನೆಯಾಕೆ ಮೀನಾಕ್ಷಿಯ ಮುಖ—ಅವಳ ಹಿಂದೆಯೋ ಮೂತಿ ಚಾಚಿದ ಮೂರು ಮಕ್ಕಳು.

ಹಿರಿಯವ ಪ್ಯಾಸು ಬೇರೆ ಕೇಳಬೇಕೆ—ಇನ್ನು ಬೂಡ್ಸು-ಪೆನ್ನು, ವಾಚು—ಪುಸ್ತಕ ಚೀಲ ಗಾಂಧಿ ಟೋಪಿಗಳಿಗಾಗಿ ನಾನು ಬರುವುದನ್ನೇ ಕಾಯುತ್ತಿರುವ— ಎರಡನೆ ಯವನಿಗೆ ಹಿರಿಯನಿಗೆ ಏನೇನು ಬೇಕೋ ಅದೆಲ್ಲಾ ಬೇಕಂತೆ—ಇನ್ನು ಕೂಸು— ಗೊತ್ತೆಇದೆ ಗ್ರೈಪ್‌ವಾಟರ್ರು-ಕ್ಯಾಸ್ಟರ್‌ಆಯಿಲ್ಲು ಇನ್ನು ಮನೆಯಾಕೆ ಕೈಯ್ಯಲ್ಲಿ ಚೀಟಿಯೇ ಇರುತ್ತೆ ಎರಡು ಪೆನ್ಸಿಲಿನ್‌ಗೆ ಲಕ್ಷಕ್ಕೋ ಮೂರು ಲಕ್ಷಕ್ಕೊ ಡಾಕ್ಟರದ್ದು ಇಂತಹ ಆದರದ ಸತ್ಕಾರ ಕಾದಿರುವಾಗ ಮನೆಗೆ ಹೋಗಲು ಹೇಗೆ ಆತುರ ಪಡು ವುದು. ದ|| ದೇರಣ್ಣನವರಿಗೆ ಈ ತಾಪತ್ರಯ ಒಂದೂ ಇರಲಿಲ್ಲ ಕಾಡುವ ಮಕ್ಕಳಿಲ್ಲ ಮೆಚ್ಚಿನ ಮಡದಿ ಸಾವಂತ್ರಿ ಒಬ್ಬಳೇ ಕಾದಿರಬೇಕು ಇಂಥಾದ್ದರಲ್ಲಿ "ಇಲ್ಲಾ" ಎಂದು ಬಾಣಾ ಎಸೆದರಲ್ಲಾ ಎಂದು ತಲೆಕೆರೆದೆ. "ಅಲ್ಲಾ ಅಂತ ನಾನಂದದ್ದು ನನ್ನ ಅಭಿ- ಪ್ರಾಯವಲ್ಲ ರಾಯರೆ—ಸೋಮಣ್ಣೋರ ಅಭಿಪ್ರಾಯ...."

"ಯಾವ ಸೋಮಣ್ಣ?"

"ಸಿರಸ್ತೆ ಸೋಮಣ್ಣೋರಂತ ಸೀಗೆಬೇಲಿ-ಶಿಡ್ಲಘಟ್ಟ-ಶಿಂಭೂಪುರ ಇತ್ಯಾದಿ ಇತ್ಯಾದಿ ತಾಲ್ಲೂಕುಗಳಲ್ಲಿ ಸೊಗಸಿನ ಸಿರಸ್ತೆ ನಡಸಿದ ಸೋಮಣ್ಣೋರು ಈ ಮಾತು ಅಂದದ್ದು....ಕಚೇರಿಯಿಂದ ಹೊರಬಿದ್ದ ಕೂಡಲೆ ಅಣ್ಣಾವರ-ಸರಪನಹಳ್ಳಿ-ಜಮಾ ಬಂದಿ ನೆನಪಿಗೆ ಬರುತ್ತೇಂತ ಅನ್ನಲಿಲ್ಲವೇ—ಈ ಕಾಲದಲ್ಲೇ ಸೊಮಣ್ಣೋರು ಸಿಸ್ಟಿನ ಸೋಮಣ್ಣೋರೂಂತ ಆದದ್ದು...." ಎಂದು ಹೇಳುತ್ತಾ ತಮಗೆ ಸಂಜೆಯಾಗುತ್ತಲೂ ಮನೆಗೆ ಹೋಗುವ ಆತುರವಿದ್ದರೂ, ಮನೆ ಎಂದರೆ ಮೂತಿ ತಿರುಗಿಸುವಷ್ಟು ಅವಸ್ಥೆ ಪಡುತ್ತಿರುವ ನನ್ನಂಥವರಿಗಾಗಿ ತಾವು ಹೇಳುವ ವಿಷಯಗಳು ಬೇಸತ್ತು ಮನಸ್ಸಿಗೆ ಮನರಂಜನೆಯಂತೆ ಇರುತ್ತವೆ ಎನ್ನುವಂತೆ ಇತ್ತು ಅವರ ಮಾತಿನ ಧೋರಣೆ. "ಬನ್ನಿ ಆ ಮೂಲೆ ಹೋಟಲಲ್ಲಿ ಅರ್ಧ ಕಾಫಿ ಕುಡಿದು ಬರೋಣ" ಎಂದರು. "ಅಯ್ಯೋ ಆ ಹೋಟಲ ಕಾಪಿಗಿಂತ ನಮ್ಮನೆಯಲ್ಲಿನ ಹರಳೆಣ್ಣೆಯೇ ವಾಸಿ ಬನ್ನಿ" ಎಂದು ಅವರನ್ನು ಇತ್ತ ಎಳೆದೆ. "ಬನ್ನೀ ರಾಯರೇ-ನೀವು ಬರ್ತಿರೋದು ದ|| ದೇರ ಣ್ಣೋರ ಜೊತೆಗೆ ಅನ್ನೋದನ್ನ ಮರೆಯಬೇಡಿ. ಆ ಪಕೋಡ ಮಾಡ್ತಾನಲ್ಲಾ ಅವ- ಅದಕ್ಕೆ ನಾನು ಅಲ್ಲಿಗೆ ಹೋಗೋದು. ಇಲ್ನೋಡಿ—ಇಡೀ ದಿನ ನಿಮಗೆ ಬೇಸರ ವಾಗಿದೆ ಈ ಹಾಳು ಕ್ಲಾರ್ಕುಗಳ ಚಾಡಿ ಸಾಹೇಬರ ಜೋರಿನಿಂದ ತಲೆ ಚಿಟ್ಟು ಹಿಡಿ ದಿರುತ್ತೆ ನಿಜ. ಅಲ್ಲಿಂದ ಒಂದು ಅರ್ಧ ಸೇರು ಪಕೋಡ ಕಟ್ಟಿಸಿಕೊಳ್ಳಿ ಮನೆಗೆ ಹೋಗೋಣ ಸಾವಂತ್ರಿ ಸೊಗಸಾದ ಕಾಫಿ ಮಾಡುತ್ತಾಳೆ ಕುಡಿದು ಹೋಗಿರಂತೆ- ಅತಿಥಿ ಸೇವೆ ಮಾಡಿದ ಪುಣ್ಯಕ್ಕೆ ಇದೆಲ್ಲಾ ನಾನು ಮಾಡ್ತಿರೋದು ಅರ್ಥವೇ" ಎಂದು ಹೋಟಲಿನ ಹತ್ತಿರಲೇ ಎಳೆದು ತಂದಿದ್ದರು. ನಾನು ಏನು ಮಾತೂ ಆಡಲು ಅವಕಾಶವಾಗದೆ ಅರ್ಧಸೇರು ಪಕೋಡ ಕಟ್ಟಿಸಿದೆ. ಸಂಜೆ ಛಳಿ ಛಳಿ ಯಾಗಿತ್ತು—ಗಂಭೀರವಾಗಿ ಪಕೋಡದ ಪೊಟ್ಟಣ ಹಿಡಿದ ದಫೆದಾರ್‍ರ ಮುಖದ

ಮೇಲೆ ಮುಳುಗುತ್ತಿರುವ .ಸೂರ್ಯನ ಕೆಂಕಿರಣಗಳು ಬಿದ್ದು ಇಸಮುನ್ನು ತೇಜಃ ಹುಂಜರನ್ನಾಗಿ ಮಾಡಿತ್ತು. ಹಿಂಬದಿಯಿಂದ ನೋಡಿದಾಗ ಅವರ ಸೀಳ್ ಹೊಟ್ಟೆ (Silhoutte) ನೋಡುವವರ ಕಣ್ಣಿಗೆ ಕಲಾತ್ಮಕವಾಗಿತ್ತು. ಮುಳುಗುವ ಸೂರ್ಯ ಅವರ ಮನೆ ಬಾಗಿಲಲ್ಲಿ ನಿಂತಿದ್ದನೇನು? ಅಲ್ಲ ಬಿಳಿಯ ಪತ್ತಲವನ್ನುಟ್ಟ ಬೇಲೂರ ಶಿಲಾ ಬಾಲಿಕೆಯ ಭಂಗಿಯಲ್ಲಿ ಸಾವಂತ್ರಮ್ಮ ನಿಂತಿದ್ದರು. ನನ್ನ ನೋಡಿ ದಫೇದಾರ್ರು ಕಿರುನಗೆ ನಕ್ಕರು, ನಾನೂ ನಕ್ಕೆ ಕಮಲದ ದಳದ ಮೇಲೆ ದುಂಬಿ ಕೂತಂತಾಯಿತೇನು? ಅಲ್ಲ ಸಾವಂತ್ರಮ್ಮ ನಕ್ಕರು ಅವರ ರೋಜಾಗಲ್ಲದಲ್ಲಿ ಕುಳಿ ಬಿದ್ದಿತು. ಬಳುಕುವ ಬಳ್ಳಿಯಂತೆ ಒಳಕ್ಕೆ ಸರಿದರು ದಫೆದಾರ್ರು ಪೇಟ ಇಳಿಸಿ– ಬೆಲ್ಟು ಬಿಚ್ಚಿ ಹಾಸಿದ ಚಾಪೆ ಮೇಲೆ ಉಸ್ಸಪ್ಪ ಹೇಳಿ ಗೋಡೆಗೆ ಆತು ಕೂತರು. ನಾನು ಹಾಸಿಗೆ ಒರಗಿ ಜರಿಪೇಟ ತೆಗೆದು ಮಂಚದ ಮೇಲಿರಿಸಿದೆ. ಅಮೃತ ಕಲಶ ಹಿಡಿದು ಅಪ್ಸರೆ ಬಂದಳೇನು? ಅಲ್ಲ ಥಳಥಳಿಸುವ ಎರಡು ಲೋಟದಲ್ಲಿ ಘಮ-ಘಮಿಸುವ ಕಾಫಿ ಹಿಡಿದು ಬಾಗಿಲ ಬಳಿ ಸಾವಂತ್ರಿ ನಿಂತಿದ್ದರು ದಫೇದಾರ್ರು ಎದ್ದು ಎರಡನ್ನೂ ತೆಗೆದುಕೊಂಡು ನಂಗೊಂದು ಕೊಟ್ಟು ಅವರೊಂದು ಮುಂದಿಟ್ಟುಕೊಂಡು ಪಕೋಡದ ಪೊಟ್ಟಣ ಬಿಚ್ಚಿ ಲೀಲಾಜಾಲವಾಗಿ ಮೆಯ್ಯ ತೊಡಗಿದರು. ನಾನು ಕಾಫಿ ಕುಡಿದೆ. ನಿಜಕ್ಕೂ ಸಾವಂತ್ರಮ್ಮನವರು ಮಾಡಿದ ಕಾಫಿ ಅಮೃತದಂತೇ ಇತ್ತು. ಕೋಕಿಲೆಯ ಇಂಚರ ಕೇಳಿಸಿತೇನು? ಇಲ್ಲ ಸಾವಂತ್ರಮ್ಮ ಮಾತಾಡಿದರು. "ಹುಡುಗರು-ಮಕ್ಕಳು ಚೆನ್ನಾಗಿದಾರೆಯೇ?—ಎಲ್ಲಿ ಮೀನಾಕ್ಷಮ್ಮನೋರು ಮನೆ ಕಡೆ ಬರಲೇ ಇಲ್ಲವಲ್ಲ " ನಾನೇನು ಹೇಳಲಿ "ಹಿಹಿಹಿ–ಪುರುಸೊತ್ತೆ ಇಲ್ಲ–ಹುಡುಗರಿಗೆ ಮೈಲಿ ಚೆನ್ನಿಲ್ಲಾ..." ಎಂದು ಹೇಳಿ ನಾನೊಂದು ಪಕೋಡ ಬಾಯಿಗೆಸಿದುಕೊಂಡು ಮೆಲುಗಿದೆ. ಹುಡುಗರು ಎಂದಾಗ ಸಾವಂತ್ರಮ್ಮ ತಲೆ ತಗ್ಗಿಸಿ ಖಾಲಿ ಲೋಟ ಹಿಡಿದು ಹೊರಟುಹೋದರು—ದ|| ದೇರಣ್ಣೋರು ತಲೆ ತಗ್ಗಿಸಿ ಹರಡಿದ ಮೀಸೆಯ ತುದಿಗೆ ಹತ್ತಿದ ಕಾಫಿ ಹನಿ ಒರಸಿ ತಲೆ ತಗ್ಗಿಸಿದರು. ಈ ಪ್ರೀತಿಯ ದಂಪತಿಗಳಿಗೆ ಒಂದೇ ಕೊರತೆ–ಮಕ್ಕಳಿಲ್ಲದ್ದು. ಮಕ್ಕಳಿಲ್ಲದ್ದು ಒಂದೇ ಚಿಂತೆ— ಅವು ಕಿರ್ರೊ ಮರ್ರೊ ಎಂದು ನಾನಾ ಸಮಸ್ಯೆ ತಂದು ಹಾಕಿದಾಗ ಹುಟ್ಟುವ ನಾನಾ ಚಿಂತೆ ಅವರಿಗಿಲ್ಲ ಮಕ್ಕಳಿರುವ ಸುಖ ನಾವೇ ಬಲ್ಲೆವು ಸಂತಾನ ಲಕ್ಷ್ಮಿಯರ ಪತಿದೇವರುಗಳು.

ಭಾರವಾದ ದಪ್ಪ ಗಂಟಲಲ್ಲಿ ದಫೆದಾರ್ರು ಹೇಳಿದರು "ಸಿರಸ್ತೆ ಸೋಮಣ್ಣನವರಿಗೆ ಹದಿಮೂರು ಜನ ಮಕ್ಕಳು—ಒಂದಲ್ಲ–ಎರಡಲ್ಲ ಆದರೂ ಮನುಷ್ಯ ಒಂದು ದಿನ ಒಬ್ಬ ಹುಡುಗನಿಗೆ ಗದುರಿದವನಲ್ಲ"

"ಏನು ಸಹನೆ—ಏನು ಸಭ್ಯ ಮನುಷ್ಯ"

" ಅದು ಹಾಗಲ್ಲ—ವಿಷಯು. ಆಸ್ವಾತಂತ್ರ್ಯವನ್ನೂ ಸುಬ್ಬಮ್ಮನೋರೇ ಉಳಿಸಿಕೊಂಡಿದ್ದರು—ಸೋಮಣ್ಣನವರಿಂದ ಹಿಡಿದು ಎಳೆಪಿಳ್ಳೆಯವರೆಗೆ ಗದುರುವ ಕೆಲಸ ಪೂರ್ತ ಅವರದೇ ಆಗಿತ್ತು...."

" ಹ ಹ್ಹ ಹ್ಹ ಚೆನ್ನಾಗಿದೆ---ಅದಕ್ಕೊ ಅ ವ ರು ಹುಡುಗರನ್ನ ಹಾಗಿಟ್ಟು ಕೊಂಡದ್ದು... ಹೂಂ ಆ ಮೇಲೆ...."

" ಸುಬ್ಬಮ್ಮ—ಸೋಮಣ್ಣನವರ ಸಿಸ್ತಿಗೆ ಮಾತ್ರ ಅಡ್ಡ ಬರುತ್ತಿರಲಿಲ್ಲ. ಬರುತ್ತಿದ್ದ ಮಾಮೂಲಿನಲ್ಲಿ ಸುಖವಾಗಿ ಸಂಸಾರ ಸಾಗಿ ಮೇಲೆ ಉಳಿತಿತ್ತು. ಅಂದ ಮೇಲೆ ಸಂಬಳವನ್ನೆಲ್ಲಾ ಸೋಮಣ್ಣನವರು ತಮ್ಮ ಸಿಸ್ತಿಗೇ ಬೇಕೆಂದು ಕೇಳಿದಾಗ ಕೊಡಲು ಸುಬ್ಬಮ್ಮ ಹಿಂದೆಗೆಯುತ್ತಿರಲಿಲ್ಲ "

" ಸಿಸ್ತು ಅಂದರೆ ಉಡುಪಿನ ವಿಷಯ ತಾವು ಹೇಳುತ್ತಿರುವುದು"

" ಹೌದು ಹೋಟಲಿಗೆ ಹೋಗುವಾಗ ಟೈಯಿ ಕಚ್ಚೆ ಪಂಚೆ—ಕಚೇರಿಗೆ ನೀಲಿ ಸೂಟು ವ್ಯಾಸ್‌ಕೋಟು ಸರಪಳಿ ಪಾಕೆಟ್‌ವಾಚು ಮೂರುವರೆ ಅಂಗುಲದ ಜರಿಪೇಟ ಹೊಳೆಯುವ ಬೂಡ್ಸು....ಹೊಟ್ಟೆಗಿಲ್ಲದಿದ್ದರೂ ಚಿಂತೆಯಿಲ್ಲ ಬೂಟಿಗೆ ಪಾಲಿಷಿರಬೇಕು ಮನುಷ್ಯನಿಗೆ. ಇನ್ನು ವಾಕಿಂಗ್ ಹೋಗಬೇಕಾದರೆ ಕಿಂಗೇ ಆತ—ಫರ್‌ಕ್ಯಾಪು ಲಾಂಗ್ ಕೋಟು ಪೈಜಾಮು ಪಂಪ ಷೂ ಮಫ್ಲರ್ ವಾಕಿಂಗ್ ಸ್ಟಿಕ್ಕು—ಇದಿಷ್ಟು ದಿರಸು ಸಾಂಗವಾಗಿ ನಡೆಯತೀರಬೇಕು "

" ಸುಬ್ಬಮ್ಮನವರೂ ಸೊಗಸಿನಲ್ಲಿ ಯಜಮಾನರಿಗೇನೂ ಕಡಿಮೆ ಇರಲಿಲ್ಲಾಂತಿನಿ "

"....ಸರಿಯಾಗಿ ಊಹಿಸಿದಿರಿ—ಈ ಗಂಡ ಹೆಂಡಿರಿಬ್ಬರ ಸೊಗಸಿನ ನಡುವೆ ಸಿಕ್ಕ ಹುಡುಗರು ನಾಯಕರಿಲ್ಲದ ಸೈನಿಕರಂತಿದ್ದಿತು-ಹರಿದ ಅಂಗಿ ಜೋಲಾಮಾಲೆ ಚಡ್ಡಿ—ಸಿರಿಸ್ತೆದಾರ್ರ ಮಕ್ಕಳು ಅನ್ನೋ ಅಹಂಭಾವದಿಂದ ಸಂತೇಲಿ ಚುರುಮುರಿ ಲಪಟಾಯಿಸಿ, ಅಂಗಡೀಲಿ ಬಾಳೆಹಣ್ಣು ಸ್ವಾಹಾ—ಶೀಬೆ ಹಣ್ಣು—ಹಿರಿಯವನಿಂದ ಕಿರಿಯವನ ತನಕ ಹೊಟ್ಟೆ ಭರ್ತಿಮಾಡಿಕೊಂಡು ಬಿಡುವರು. ಹಿಡಿದು ಲಾಕಪ್ಪಿಗೆ ತಂದರೆ—ನಾನೇ ದಫೆದಾರ್‍ರು—ಇನ್ನು ಸಿರಿಸ್ತೆದಾರ್ರ ಸಿಸ್ತುನೋಡಿ ಬಿಡುಗಡೆ ಮಾಡಲೇಬೇಕು—ಈ ಹುಡುಗರನ್ನ ಹತೋಟಿಲಿಡೋಕೆ ಕಾನಸ್ಟೇಬಲ್‌ಗಳ ಒಂದು ತಂಡ ಅದೇ ಕೆಲಸವಾಗಿ ಒಪ್ಪಿಸಿದ್ದೇನೆ "

" ಅಲ್ಲ್ರೀ—ರಾಮಾಯಣ ಹೇಳ್ತಿನೀಂತ ಬರೀ ವಾನರಸೇನೆ ವರ್ಣಿಸೋ ದಾಸರ ಹರಿಕಥೆ ಹಾಗಾಯ್ತು ನೀವು ಹೇಳ್ತಿರೋ ವಿಷಯ—ಸೋಮಣ್ಣೋರ ಸಿಸ್ತಿನ ವಿಷಯ ಹೇಳ್ತೀಂತ ಅಂದ್ರೇ ಆ ಹುಡುಗರ ವಿಷಯ ವದರ್‍ತಾ ಇದ್ದೀರೇ ೯... "

"....ದೇವರಿಗಿಂತ ಭಕ್ತನ ವಿಷಯ ಮೊದಲು ಹೇಳತೀರಬೇಕಲ್ಲವೆ? ಆ ಹುಡುಗರ ದಾಂಧಲೆ ಸಮಾಚಾರಕ್ಕಿಂತ ಅವರನ್ನು ಕಾಯೋ ನಮ್ಮ ಕಾನ್‌ಸ್ಟೆಬಲ್ಲುಗಳ ಕಾರ್ಯ ತೋಡಿಕೊಳ್ಳೋದೆ ನನ್ನ ಅಭಿಪ್ರಾಯವಾಗಿ ಕ್ಷಮಿಸಿ ಮುಖ್ಯ ಕಥೆಗೆ ಪ್ರವೇಶಿಸುವಾ—ಸರಪೆನಹಳ್ಳಿ ಜಮಾಬಂದಿ—ಡಿಪ್ಟಿಕಮೀಷನ್ನು ಡಿಸ್ಟ್ರಿಕಟ್ಟಿನಿಂದ ನಮ್ಮ ತಾಲ್ಲೋಕಿಗೆ ಬಂದು ಹಳ್ಳಿ ಸೇರಬೇಕು....ಹಳೇಕಾಲದ ಮನುಷ್ಯ ಅಂಗಾರ ಅಕ್ಷತೆ—ಆಚಾರವಂತ ಆ ಸಾಹೇಬರು ಆಸ್ಟಿನ್ ಕಾರಿನಲ್ಲಿ ಸವಾರಿ ನಮ್ಮೂರಿಗೆ ಚಿತ್ತೈಸಿತು—ಬಂಗ್ಲೆಲಿ ಹಸರುವಾಣಿ ಚಪ್ಪರ ಹಾಕಿಸಿ ಸೋಮಣ್ಣೋರು ಪರಿವಾರ ದೇವತೆಗಳ ಸಮೇತ ಕೈ ಕಟ್ಟಿ ನಿಂತಿದ್ದರು....ಹಿಂದಿನ ರಾತ್ರಿ ಹೊರಟವರು ನಲವತ್ತು ಮೈಲಿಗೆ ನಲವತ್ತು ಘಂಟೆ ತೆಗೆದುಕೊಂಡು ಬಂದಿದ್ದರು—ನಡೆದೇ ಬಂದಿದ್ದರೆ ಇನ್ನೂ ಜಾಗ್ರತೆ ಬರಬಹುದಾಗಿತ್ತು.—ನಾನು ಹಾಗೂ ಇಬ್ಬರು ಕಾನ್ಸ್ಟೆಬಲ್ಲುಗಳನ್ನು ಅಟ್ಟಿದ್ದೆ. ಅವರು ಮೂರು ಮೈಲಿ ಕಾರು ತಳ್ಳಿ ನೀರು ಕುಡಿದುಬರ್‍ತೀವೆಂತ ಹೋದವರು ಪತ್ತೇನೆ ಇಲ್ಲ ಬರ್‍ಲಿ ಅವರಿಗೆ ಫೈನು ಹಾಕೋಣಾಂತ ಇದ್ದರೆ ಅವರು ರಾಜಿನಾಮೆ ಕೊಟ್ಟು ಸಂಬಳ ಕೇಳಿದರು...."

"ಹ ಹ ಹ ಹ....ಚೆನ್ನಾಗಿದೆ....ಆಮೇಲೆ?...."

"ಮರುದಿನ ಬೆಳಗಿನಜಾಮ ಸರಪೆನಹಳ್ಳಿಗೆ ಹೊರಡುವುದೆಂದು ಕಾರ್ಯಕ್ರಮ ಹಾಕಿದರು. ಅಮಿಲ್ದಾರರಿಗೆ ಆಸ್ತಮ ಅಟ್ಯಾಕ್ ಆಗಿದ್ದ ಪ್ರಯುಕ್ತ ಸ್ವಯಂ ಸೋಮಣ್ಣೋರೇ ಸಾಹೇಬರ ಜೊತೆಗೆ ಹೊರಡುವುದೆಂದೂ ನಾನು ನಾಲ್ಕುಮಂದಿ ಕಾನ್ಸ್ಟೆಬಲ್ಲುಗಳೊಡನೆ ಕೂಡಲೆ ಹೊರಟು ಸರಪೇನಹಳ್ಳಿಯಲ್ಲಿ ಸುಗ್ರಾಸಕ್ಕೆ ಸಕಲ ಏರ್ಪಾಟನ್ನು ಅಣಿಮಾಡಲು ಹೊರಡತಕ್ಕದೆಂದು ಆಜ್ಞೆಯಾಯಿತು. ನಾನೇ ಸೂಕ್ಷ್ಮವಾಗಿ ಎಲ್ಲರನ್ನೂ ಕಾರು ಹತ್ತಿಸಿ ಸರಸರನೆ ಕಾಲುನಡಿಗೆಯಲ್ಲಿ ಹೊರಟರೂ ಸಾಕು ಎಂದು ಸೂಚಿಸಿದೆ, ಸಾಹೇಬರು ಸಮ್ಮತಿ ಸೂಚಿಸಿದರು."

"ಸರಿ ಮರು ದಿನ ಹೊರಟಿರಬೇಕು....ಇನ್ನೇನು—"

"ಹೂಂ ಕೇಳಿ—ಬೆಳಗಿನಜಾವಕ್ಕೆ ಸಾಹೇಬರು ಎದ್ದು ವಾಯುಸ್ತುತಿ—ವಿಷ್ಣು ಸ್ತೋತ್ರ ಹೇಳಿ ಸಟ್‌ಕಾಲರ್ ಕೋಟು ಕಾಲಿಗೆ ಕೊಳವಿಪ್ಯಾಂಟು ಬೂಟು ಹಾಕಿ ಹೊರಕ್ಕೆ ಬಂದಾಗ ಸೊಮಣ್ಣೋರು ಆಗಲೇ ಬಂದು ನಿಂತಿದ್ದರು—ಡ್ರೈವರ್‍ರು ಸೋಮಣ್ಣೋರು ಸಾಹೇಬರು ಇಷ್ಟು ಜನ ಕಾರಲ್ಲೂ ನಾವೆಲ್ಲ ನಡೆದೂ ಹೊರಡುವುದೆಂದು ತಿಳಿಸಿದರು ಡ್ರೈವರು ಕೂಡಲೇ ಇಲ್ಲ—ಏನೋ ಹುಡುಕುತ್ತಿದ್ದ. ಸಾಹೇಬರು 'ಏನೋ ಅದು ಜಾಗ್ರತೆ ಸ್ಟಾರ್ಟ್‌ಮಾಡು' ಅಂದಾಗ ನಿರ್ವಾಹವಿಲ್ಲದೆ ಆ ಗಫೂರು 'ಹಿಂದಿನ ಚಕ್ರ ರಾತ್ರಿ ಕಳವಾಗಿದೆ' ಎಂದು ಹೇಳಿದ. ದ॥ ದೇರಣ್ಣೋರೇ ಜಾಗ್ರತೆ ಹುಡುಕಿಸಿ ಇನ್ನು ಅರ್ಧ ಘಂಟೇಲಿ ಕಾರು ಹೊರಡಲೇಬೇಕು – ಇದು ಸುಗ್ರೀವಾಜ್ಞೆ

ಎಂದು ಮೂತಿ ಮುಂದುಮಾಡಿದರು ವಾಯು ಸ್ತುತಿ ಪಠಿಸುತ್ತಿದ್ದ ಸಾಹೇಬರು. ನಾನು ಕಾ|| ಫಕೀರನ ಕಡೆ ನೋಡಿದೆ— ಅವನು ನೇರವಾಗಿ ಸೋಮಣ್ಣನವರ ಮನೆ ಕಡೆ ಹೊರಟುಹೋದ...."

"ಅರೆ! ಅಲ್ಲಿಗೆಹೋದರೆ ಕಳೆದುಹೋದ ಕಾರಿನ ಹಿಂದಿನ ಚಕ್ರ ಸಿಗುತ್ತದೆಯೆ?...."

"ಕಾ|| ಪಕೀರನಿಗೆ ಗೊತ್ತು ಈ ಘಟಿಂಗಶನವೆಲ್ಲಾ ಸೋಮಣ್ಣೋರ ಸಂತಾನಗಳದ್ದೆಂತ....ಗಾಲಿ ಆಟ ಆಡೋಕೆ ಆ ಹುಡುಗರು ಲೂಸಾಗಿದ್ದ ಈ ಕಾರಿನ ಗಾಲಿಗೆ ಗಂಟು ಬಿದ್ದಿದ್ದರು. ಸೋಮಣ್ಣೋರ ಮನೆ ಹಿಂದಿನ ಕುದುರೆಲಾಯದಲ್ಲಿದ್ದ ಚಕ್ರ ಹಿಡಿದು ಏದುತ್ತಾ ಓಡಿಬಂದ ನಮ್ಮ ಫಕೀರು. ಸಾಹೇಬರು ಭೇಷ್ ಅಂದರು. ಗಪೂರ ಅಂತೂ ಇಂತು ಚಕ್ರ ಸಿಕ್ಕಹಾಕಿ ಸ್ಟಾರ್ಟ್‌ಮಾಡೇಬಿಟ್ಟ. ಅವನ ಪಕ್ಕದಲ್ಲಿ ಸೋಮಣ್ಣೋರು ಕೂಡೋಕೆ ಹೋದರು— ಬಾಗಿಲಲ್ಲೆ ಹಿಡಿಸಲಿಲ್ಲ "

"ಅರೆ ಅಷ್ಟು ದಪ್ಪವೇ ಅವರು"

"ಕಿಂಗ್ ಕಾಂಗ್— ಧಾರಾಸಿಂಗ್-ಧೀರಾಸಮಾರ— ಈ ಪೈಲ್ವಾನ್‌ಗಳಷ್ಟೇ ತಿನ್ನುವವರು-ಕೋಟಿಗೆ ಆರು ಗಜ ಬಟ್ಟೆಬೇಕು ಲೆಖ್ಖಾ ಹಾಕಿ ಅವರ ಸುತ್ತಳತೆ-ಆಗಲೆ ಹೊತ್ತಾಗಿಹೋಗಿದೆ-ಹೊರಡಬೇಕು-ಅಂತೂ ಇಂತೂ ತೂರಿ ಕುಳಿತಾಗ ಡ್ರೈವರ್ ಗಫೂರ ಆ ಕಡೆ ಬಾಗಿಲಿಂದ ಹೊರಕ್ಕೆ ಬಿದ್ದಿದ್ದ.-ಸಾಹೇಬರ ಸವಾರಿ ಇಳಿಯಲೇಬೇಕಾಯ್ತು-ಹಿಂದಿನ ಸೀಟು ಸೋಮಣ್ಣನವರಿಗೆ ಕೊಟ್ಟು ತಾವು ಸಾಹೇಬರು ಸಾಬಿ ಗಫೂರನ ಪಕ್ಕಕ್ಕೆ ಕೂತುಕೊಳ್ಳಬೇಕಾಯಿತು...."

"ಈ ಜಮಾಬಂದೀ ಸಾಕು ಸಾಕಾಗಿ ಹೋಗಿರಬೇಕು ಸಾಹೇಬರಿಗೆ ಅಲ್ಲವೆ"

"ಆ ಸಾಹೇಬರದ್ದು ಒಂದು ಚಟ-ಹಾರಾ ಹಾಕಿಸಿಕೋಬೇಕು-ಚಪ್ಪಾಳೆ ತಟ್ಟಿಸಬೇಕು ಮೆರವಣಿಗೆ ಹೋಗಬೇಕು-ಅನ್ನೋ ಹಂಬಲ ಆತನದು. ಸರಪೇನಹಳ್ಳಿಲಿ ಹಾಕೋಹಾರ-ಮಾಡೋ ಮೆರವಣಿಗೆಯ ಸುಖ ನೆನೆದು ಸಧ್ಯಕ್ಕೆ ಕಷ್ಟ ಪಡಲು ಅವರು ತಯಾರಿದ್ದರು. ಅಂದ ಮೇಲೆ ಸೋಮಣ್ಣನವರು ಹಿಂದಿನ ಸೀಟಿನಲ್ಲಿ ಕೂಡ ಬಹುದಲ್ಲವೇ?-ಒಳ್ಳೆ ಸಿಸ್ತಿನಿಂದ ಸೋಮಣ್ಣನವರು ಹಿಂದಿನ ಸೀಟಲ್ಲಿ ಮಂಡಿಸಿದರು ಅಂತೂ ಕಾರು ಹೊರಟಿತು. ನಾವು ಕಾಲುದಾರಿಯಲ್ಲಿ ಸರಪೇನಹಳ್ಳಿಗೆ ಹೊರಟೆವು. ಹತ್ತು ಘಂಟೆ ಹೊತ್ತಿಗೆಲ್ಲಾ ನಾವು ಹಳ್ಳಿ ಸೇರಿದ್ದೆವು-ಸಾಹೇಬರ ಕಾರು ಬರುತ್ತಿರುವ ಎಚ್ಚರಕೊಟ್ಟೆವು. ಚಪ್ಪರದ ಹತ್ತಿರ ಗೌಡರು-ಪಟೇಲರು-ಪ್ರಮುಖರು ಹಾರಾತುರಾಯಿ ಹಿಡಿದು ನಿಂತಿದ್ದರು. ತಮಟೆ-ಕಹಳೆ-ವಾಲಗದವರನ್ನೂ ಶಾನುಭೋಗರು ಹಿಡಿದು ತಂದಿದ್ದರು, ಕಾರು ಬಂದಕೂಡಲೆ ಊರಿನ

ಹಿರಿಯರ ಕೈಲಿ ಹಾರಾ ಹಾಕಿಸಿ ಹನುಮಂತದೇವರ ಗುಡಿತನಕ ಮೆರವಣಿಗೆಯಲ್ಲಿ ಕರೆದೊಯ್ಯುವುದೆಂದು ಕಾರ್ಯಕ್ರಮ ಹಾಕಿಕೊಂಡಿದ್ದರು. ಹೊತ್ತು ಹನ್ನೊಂದಾಯಿತು ಕಾರು ಬರಲಿಲ್ಲ. ಪಟೇಲರು ತಟ್ಟೆಯಲ್ಲಿದ್ದ ಹಣ್ಣು ಹಂಪಲು ತಿನ್ನೋಣವೆ? ಇನ್ನು ಬರಲಾರರು ಎಂದು ಸೂಚಿಸಿದರು. ಶಾನುಭೋಗರು ಶ್ವಾನನಂತೆ ಎಗರಿ ಬೊಗಳಿ ಪಟೇಲರನ್ನು ಪರಚುವುದರಲ್ಲಿದ್ದರು. ನಾನು ಶಾನುಭೋಗರಿಗೆ ಸಮಾಧಾನ ಹೇಳಿ ನಾಲ್ಕು ಆಳನ್ನೂ ಒಂದು ಜೊತೆ ಎತ್ತನ್ನೂ ಕಳಿಸುವುದು ಮೇಲೆಂದು ಹೇಳಿದೆ ಅವರು ಹಾಗೇ ಮಾಡಿದರು. ನಿಜಕ್ಕೂ ಕಾರು ದಾರಿಯಲ್ಲಿ ಕೆಟ್ಟುಹೋಗಿತ್ತು–ಗಾಲಿ ಜಖಂ ಆಗಿತ್ತು–ಎತ್ತು ಕಟ್ಟಿ ಎಳೆಸಿಕೊಂಡು ಬಂದಾಗ ಮಧ್ಯಾಹ್ನ ಒಂದೂವರೆ ಘಂಟೆಯಾಗಿತ್ತು–ಕಾದ ಮಂದಿ ಹಸಿದು ಸೊರಗಿ ಹಾಕಿದ ಚಪ್ಪರದಲ್ಲಿ ಒರಗಿದ್ದರು ಬಂದರು–ಬಂದರು ಅಂತ ಲಗುಬಗೆಯಿಂದ ಎದ್ದರು–ಕಾರಿನಲ್ಲಿ ಜಬರದಸ್ತಾಗಿ ತೂಕವಾಗಿ ಹಿಂದಿನ ಸೀಟಿನಲ್ಲಿ ಜಬರದಸ್ತಾಗಿ ಕುಳಿತ ಸೋಮಣ್ಣನವರೇ ಸಾಹೇಬರೆಂದು ಊರಿನ ಹಿರಿಯ ತೀರ್ಮಾನಿಸಿ ಹಾರಾ ಹಾಕಿದ–ತೂಕವಾದ ಶರೀರ ಗಂಭೀರವಾದ ನಡಿಗೆ–ಠೀವಿಯ ಮಂದಹಾಸ ಸಿಸ್ತಿನ ದಿರಿಸು ನೋಡಿದರೆ ಯಾರಾದರೂ ಇವರೇ ಸಾಹೇಬರೆಂದು ಮರುಳಾಗುವುದು ಸಹಜ...."

"ಹ ಹ ಹ....ಪಾಪ ಆ ಡೆಪ್ಟಿ ಕಮೀಷನ್ನರು ಸುಸ್ತೂನ್ನಿ...."

"ಸುಸ್ತೂಂತ ಕೇಳ್ತಿರಾ–ನಾವೆಲ್ಲಾ ಕೈ ಕೈ ಹಿಸುಕಿಕೊಂಡೆವು–ಶಾನುಭೋಗರು ಬಾಯಿ ಬಡಿದುಕೊಂಡರು–ಭೋರ್ಗರೆವ ತಮಟೆ–ಆ ಕಹಳೆ–ವಾಲಗದ ಗದ್ದಲದ ಸೋಮಣ್ಣನವರ ಮೆರವಣಿಗೆ ಹೊರಟೇಬಿಟ್ಟಿತು. ಅವರ ಮದುವೆಯಲ್ಲಿ ಆದ ಮೆರವಣಿಗೆ ನಂತರ ಇದೇ ಇದೇ ಮೆರವಣಿಗೆ ಬಹು ಹಿತವಾಗಿರಬೇಕು–ತಾವು ಡೆಪ್ಟಿ ಕಮೀಷನ್ನರಲ್ಲಾಂತ ಕೂಡ ಹೇಳಲಿಲ್ಲ ಆತ. ಸಿಟ್ಟಿನಿಂದ ಸಿಡಿದ ಸಾಹೇಬರು ಸರಸರನೆ ಮಾರುತಿ ಗುಡಿಗೆ ಹೋಗಿ ವಾಯುಸ್ತುತಿ ಗಟ್ಟಿಯಾಗಿ ಹೇಳುತ್ತಾ ಕುಳಿತರು. ದಾರಿಯಲ್ಲಿ ಕೈ ಮುಗಿದವರಿಗೆ ಪ್ರತಿ ವಂದನೆಮಾಡುತ್ತಾ ಜಂಭೂಸವಾರಿಗೇ ಹೊರಟಿರುವೆನೆಂಬು ಭಾವಿಸಿದ್ದರು ಸೋಮಣ್ಣನವರು. ಮಾರುತಿ ಗುಡಿ ಬಳಿ ಬಂದಾಗ ಕೈ ಮುಗಿದು ಸಾಕ್ಷಾತ್ ವಾಯುಪುತ್ರನ ಅಪರಾವತಾರದಂತೆ ಕುಳಿತ ಸಾಹೇಬರನ್ನ ಕಂಡಾಗ ಮೆರವಣಿಗೆ ಅಮಲ ಇಳಿದಿತ್ತು. ಅವರು ಸಾಹೇಬರು ಅವರ ಆಜ್ಞೆ ನೆರವೇರಿಸುವ ಕೇವಲ ಸಿರಸ್ತೆದಾರ್ರು ಎಂಬ ಪರಿಜ್ಞಾನ ಬಂದು ಕೊರಳಲ್ಲಿನಹಾರ ತೆಗೆದು–ಶಾನುಭೋಗರಿಗೆ ಕೊಟ್ಟು–ಆದ ಅಚಾತುರ್ಯ ವರ್ಣಿಸಿದರು...."

"ಅಲ್ರಿ, ನೀವು ಪಾಪ ಆ ಹಳ್ಳಿಯವರಿಗೆ ನಿಜವಾದ ಡೆಪ್ಟಿ ಕಮೀಷನ್ನರನ್ನ ತೋರಿಸಬಾರದಾಗಿತ್ತೆ?..."

"ಎಲ್ಲಾ–ಅವಸರ ಅವಾಂತರದಲ್ಲಿ ನಡೆದುಹೋಯ್ತೂಂದ್ರೆ. ಬೆಳಗಿನಜಾವ ದಿಂದ ಕಾದಿದ್ದರು–ಹನ್ನೆರಡರ ಹೊತ್ತಿಗೆ ವಿಪರೀತ ಹಸಿವು–ಪಟೇಲರು ಸೂಚಿಸಿದ ಹಾಗೆ ಹಣ್ಣು ತಿನ್ನಬಾರದಾಗಿತ್ತೆ–ಅದನ್ನೂ ಸೋಮಣ್ಣನವರ ಕೈಗೇ ಕೊಟ್ಟಿದ್ದರು ಸೋಮಣ್ಣನವರು ಗುಡಿಗೆ ಬಂದು ತಮ್ಮ ತಪ್ಪಿಗೆ ತಲೆ ತಗ್ಗಿಸಿ ಮೂಲೆಯಲ್ಲಿ ಕುಳಿತು ಆ ಶೋಕದಲ್ಲಿ ತಟ್ಟೆಯಲ್ಲಿದ್ದ ಆರು ಚಿಪ್ಪು ಬಾಳೆ ಹಣ್ಣು–ಮಾವಿನ ಹಣ್ಣು ಎಂಟು ತೆಂಗಿನ ಕಾಯಿ-ಎಲ್ಲಾ ತಿಂದು ಎಲೆ ಜಗಿದು ಅಡಿಕೆಮುಕ್ಕಿ ಕಡೆಗೆ ಉಳಿದ ಒಂದು ನಿಂಬೆಹಣ್ಣನ್ನೂ ಜಗಿದು ತಿಂದು ಬಿಟ್ಟರು. ಊರವರು ಕ್ಷಮಾಪಣೆ ಯಾಚಿಸಿದರು ಅಂತೂ ಜಮಾ ಆಗದೆ ಆ ಹಳ್ಳಿಯಲ್ಲಿ ತಾವು ಕೇವಲ ಬಂದಿಗಳಂತೆ ಆಗಿದ್ದಕ್ಕೆ ಡಿಪ್ಟಿ ಕಮೀಷನ್ನರು ಕೆಲಸ ಆಯಿತು ಅನ್ನಿಸಿ ಕಾರಿಗೆ ಎತ್ತು ಕಟ್ಟಿಸಿಕೊಂಡು ಹೊರಟೇ ಹೋದರು. ಸೋಮಣ್ಣೋರು ಬೇರೆ ಗಾಡಿ ಕಟ್ಟಿಸಿಕೊಂಡು ತೆರಳಿದರು...."

"ಚೆನ್ನಾಗಿದೆ—ಸೋಮಣ್ಣೋರ ಕಥೆ...."

"....ಆ ತಕ್ಷಣವೇ ಸೋಮಣ್ಣನವರಿಗೆ ಕೊಪ್ಪಕ್ಕೆ ವರ್ಗವಾಯಿತು. ಅರೆ ಆಗಲೆ ಹೊತ್ತಾಯಿತು....

ಇನ್ನೊಮ್ಮೆ ಬಂದಾಗ ಸೋಮಣ್ಣೋರ ಇನ್ನೊಂದು ಪ್ರಸಂಗ ಹೇಳ್ತೀನೆ.... ಕಚೇರಿಯಿಂದ ಇಲ್ಲಿಗೇ ಎಳೆತಂದು ನಿಮಗೆ ತೊಂದರೆ ಕೊಟ್ಟೆ...."

"ಇಲ್ಲ ದಫೆದಾರ್ರೆ ಇಂಥಾ ಕಥೆ ಹೇಳೋದಾದರೆ–ನಿಮ್ಮಲ್ಲೇ ಬೇಕಾದರೆ ನಾನು ಇರಲಿಕ್ಕೆ ತಯಾರು...." ಎಂದೆನ್ನುವಾಗಲೆ ಸಾವಂತ್ರಮ್ಮ ಬಂದರು. "ನೀವೇನೋ ಇದ್ದೀರ ಪಾಪ—ನಿಮ್ಮ ಕೈಹಿಡಿದ ಮೀನಾಕ್ಷಮ್ಮ ನನ್ನ ಬಿಡ್ತಾರೆಯೆ....ನುಂಗಿ ಹಾಕ್ತಾರು...." ಎಂದು ಮಾತು ಮುಗಿಸಿದರು. ನಮಸ್ತೆ ಹೇಳಿ ದಂಪತಿಗಳನ್ನು ಬೀಳ್ಕೊಟ್ಟೆ. ಪಿರಸ್ತೆ ಸೋಮಣ್ಣನವರು ಕಣ್ಣಿಗೆ ಕಟ್ಟಿದಂತೆ ಇದ್ದರು

—ದಾಶರಥಿದೀಕ್ಷಿತ್.